# ಸಮಾಜ ಕಲ್ಯಾಣ ಇಲಾಖೆ

**ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಅಧ್ಯಕ್ಷರು ರಾಜ್ಯ ಅನುಸೂಚಿತ ಜಾತಿಗಳ/ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ–2013 ರಂತೆ ದಿನಾಂಕ: 20.05.2022 ರಂದು ನಡೆದ ಸಭೆಯ ನಡವಳಿಗಳು**

**ಸಭೆಗೆ ಹಾಜರಾದ ಸದಸ್ಯರುಗಳ ಮತ್ತು ಅಧಿಕಾರಿಗಳ ವಿವರ:–**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1. | ಶ್ರೀ ಬಸವರಾಜ ಬೊಮ್ಮಾಯಿ<br>ಸನ್ಮಾನ್ಯ ಮುಖ್ಯಮಂತ್ರಿಗಳು. | ಅಧ್ಯಕ್ಷರು |
| 2. | ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ಮಾನ್ಯ ಸಮಾಜ ಕಲ್ಯಾಣ ಸಚಿವರು | ಉಪಾಧ್ಯಕ್ಷರು |
| 3. | ಶ್ರೀ ಬಿ. ಶ್ರೀರಾಮುಲು<br>ಮಾನ್ಯ ಸಾರಿಗೆ ಹಾಗೂ ಪ.ಪಂಗಡಗಳ ಕಲ್ಯಾಣ ಸಚಿವರು, | ಸದಸ್ಯರು |
| 4. | ಶ್ರೀ ಜೆ.ಸಿ.ಮಾಧು ಸ್ವಾಮಿ<br>ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು | ಸದಸ್ಯರು |
| 5. | ಶ್ರೀ ಗೋವಿಂದ ಎಂ. ಕಾರಜೋಳ,<br>ಮಾನ್ಯ ಜಲಸಂಪನ್ಮೂಲ ಸಚಿವರು. | ವಿಶೇಷ ಆಹ್ವಾನಿತರು |
| 6. | ಶ್ರೀ ಐಹೊಳೆ ದುರ್ಯೋಧನ<br>ಮಾನ್ಯ ಶಾಸಕರು, ರಾಯಭಾಗ ವಿಧಾನಸಭಾ ಕ್ಷೇತ್ರ | ಸದಸ್ಯರು |
| 7. | ಶ್ರೀ ಎನ್. ಮಹೇಶ್<br>ಮಾನ್ಯ ಶಾಸಕರು, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ | ಸದಸ್ಯರು |
| 8. | ಶ್ರೀ ಪಿ. ರವಿ ಕುಮಾರ್, ಭಾ.ಆ.ಸೇ.<br>ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ | ಸದಸ್ಯರು |
| 9. | ಶ್ರೀಮತಿ ವಂದಿತಾ ಶರ್ಮಾ, ಭಾ.ಆ.ಸೇ.<br>ಅಭಿವೃದ್ಧಿ ಆಯುಕ್ತರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | ಸದಸ್ಯರು |
| 10. | ಶ್ರೀ ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ.<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, | ಸದಸ್ಯರು |
| 11. | ಮೇಜರ್ ಪಿ. ಮಣಿವಣ್ಣನ್ ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ. | ಸದಸ್ಯ ಕಾರ್ಯದರ್ಶಿ |
| 12. | ಡಾ. ಇ. ವೆಂಕಟಯ್ಯ, ಭಾ.ಆ.ಸೇ (ನಿ) | ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಏಜೆನ್ಸಿ ಸಲಹೆಗಾರರು. |
| 13. | ಉಪ ಯೋಜನೆಗಳನ್ನು ಅನುಷ್ಟಾನ ಮಾಡುತ್ತಿರುವ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು | ಅನುಷ್ಟಾನ ಅಧಿಕಾರಿಗಳು (ವಿಶೇಷ ಆಹ್ವಾನಿತರು) |

ರಾಜ್ಯ ಅಭಿವೃದ್ಧಿ ಪರಿಷತ್ತಿನ ಅಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಗಳನ್ನು, ಉಪಾಧ್ಯಕ್ಷರಾದ ಮಾನ್ಯ ಸಮಾಜ ಕಲ್ಯಾಣ ಸಚಿವರನ್ನು, ಸದಸ್ಯರಾದ ಮಾನ್ಯ ಸಚಿವರುಗಳನ್ನು ಮತ್ತು ರಾಜ್ಯ ಪರಿಷತ್ತಿನ ಎಲ್ಲಾ ನಾಮನಿರ್ದೇಶಿತ ಸದಸ್ಯರನ್ನು ಸಭೆಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು, ಸ್ವಾಗತಿಸಿದರು. ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಮತ್ತು ಸಭೆಗೆ ಹಾಜರಾದ ಎಲ್ಲಾ ಇಲಾಖಾ ಮುಖ್ಯಸ್ಥರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲು ಮಾನ್ಯ ಅಧ್ಯಕ್ಷರ ಅನುಮೋದನೆ ಕೋರಿದರು.

ಮಾನ್ಯ ಅಧ್ಯಕ್ಷರ ಅನುಮತಿ ಮೇರೆಗೆ ಸರ್ಕಾರ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ಪ.ಜಾತಿ/ಪ.ಪಂಗಡದವರ ಅಭಿವೃದ್ಧಿಗೆ 2022-23ನೇ ಸಾಲಿನಲ್ಲಿ ಎಲ್ಲಾ ಇಲಾಖೆಗಳಿಗೆ ಹಂಚಿಕೆ ಮಾಡಿರುವ ಒಟ್ಟು ರೂ.28234.36 ಕೋಟಿಗಳ ಅನುದಾನವನ್ನು ವಿವಿಧ ಇಲಾಖೆಗಳ ಕಾರ್ಯಕ್ರಮಗಳಿಗೆ ಉಪಯೋಗಿಸುವ ಬಗ್ಗೆ ದಿನಾಂಕ: 29.04.2022 ರಂದು ನೋಡಲ್ ಏಜೆನ್ಸಿ ಸಭೆಯಲ್ಲಿ ಚರ್ಚಿಸಿ, ಸದರಿ ಸಭೆಯ ಶಿಫಾರಸ್ಸುಗಳೊಂದಿಗೆ ರಾಜ್ಯ ಅಭಿವೃದ್ಧಿ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಲಾಗಿದೆ. ಇಂದಿನ ರಾಜ್ಯ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಪ್ರಸ್ತಾಪಿಸಿರುವ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಕೋರಿದರು.

**ಅಜೆಂಡಾ -1 : 2021-22ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿ ವಿವರದ ಬಗ್ಗೆ ಈ ಕೆಳಗಿನಂತೆ ವಿವರಿಸಲಾಗಿದೆ.**

(ರೂ. ಕೋಟಿಗಳಲ್ಲಿ)

| ಉಪ ಯೋಜನೆ | ಮೂಲ ಹಂಚಿಕೆ | ಪರಿಷ್ಕೃತ ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ(%) | ಬಿಡುಗಡೆಗೆ(%) |
|---|---|---|---|---|---|---|
| SCSP | 18331.54 | 19198.81 | 18541.32 | 18496.13 | 96.34 | 99.76 |
| TSP | 7673.47 | 7822.80 | 7559.09 | 7522.20 | 96.16 | 99.51 |
| **ಒಟ್ಟು** | **26005.01** | **27021.61** | **26100.41** | **26018.33** | **96.29** | **99.69** |

2021-22ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ ಅಡಿಯಲ್ಲಿ ರೂ.18331.54 ಕೋಟಿ ಮತ್ತು ಟಿ.ಎಸ್.ಪಿ. ಅಡಿ ರೂ. 7673.54 ಕೋಟಿ ಒಟ್ಟು ರೂ.26005.01 ಕೋಟಿಗಳನ್ನು ಮೂಲತಃ ಹಂಚಿಕೆ ಮಾಡಲಾಗಿದೆ. ನಂತರ, ಪೂರಕ ಅಂದಾಜಿನಲ್ಲಿ ಹೆಚ್ಚುವರಿಯಾಗಿ ರೂ.1016.61 ಕೋಟಿಗಳನ್ನು ಒದಗಿಸಲಾಗಿದೆ. ಇಲಾಖಾವಾರು ಪ್ರಗತಿ ವಿವರವನ್ನು ಲಗತ್ತಿಸಿದೆ.

2022-23 ನೇ ಸಾಲಿನಲ್ಲಿ ಒಟ್ಟು ಆಯವ್ಯಯದ ರೂ.2.50 ಲಕ್ಷ ಕೋಟಿಗಳು. ಅದರ ಪೈಕಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ರೂ.1.14 ಲಕ್ಷ ಕೋಟಿ ನಿಗದಿಪಡಿಸಿದ್ದು, ಅದರಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಗೆ 24.10% ರಂತೆ ರೂ. **28234.36 ಕೋಟಿಗಳನ್ನು (ಬಳಕೆಯಾಗದ ಮೊತ್ತ ರೂ. 393.00 ಕೋಟಿ ಸೇರಿ)** ಒದಗಿಸಲಾಗಿದೆ.

**ಅಜೆಂಡಾ-2 : 2022-23ನೇ ಸಾಲಿನ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಹಂಚಿಕೆ ಈ ಕೆಳಗಿನಂತಿದೆ.**

(ರೂ. ಕೋಟಿಗಳಲ್ಲಿ)

| ವಿವರ | ರಾಜಸ್ವ | ಬಂಡವಾಳ | ಒಟ್ಟು |
|---|---|---|---|
| ಎಸ್.ಸಿ.ಎಸ್.ಪಿ | 14915.39 | 5197.08 | 20112.47 |
| ಟಿ.ಎಸ್.ಪಿ | 5725.43 | 2396.46 | 8121.89 |
| ಒಟ್ಟು | 20640.82 | 7593.54 | 28234.36 |

2022-23ನೇ ಸಾಲಿನ ಅನುದಾನಕ್ಕೆ ಅನುಗುಣವಾಗಿ ಇಲಾಖಾವಾರು ಕ್ರಿಯಾ ಯೋಜನೆಯ ವಿವರಗಳನ್ನು ಈ ಕೆಳಗಿನಂತೆ ರಾಜ್ಯ ಅಭಿವೃದ್ಧಿ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಲಾಯಿತು.

**1. ಕೃಷಿ ಇಲಾಖೆ :**

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 542.60 | 542.55 | 541.94 (99.88%) | 725.78 | 183.18 |
| ಟಿ.ಎಸ್.ಪಿ | 310.06 | 310.02 | 309.56 (99.84%) | 336.13 | 26.07 |
| ಒಟ್ಟು | 852.65 | 852.56 | 851.50 | 1061.92 | 209.05 |

ಕೃಷಿ ಇಲಾಖೆಗೆ ರೂ.209.05 ಕೋಟಿ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಲಾಗಿದೆ. ಬೆಳೆ ವಿಮಾ ಯೋಜನೆಯಡಿ ರೂ.150.00 ಕೋಟಿ ಒದಗಿಸಿದ್ದು, ಹಿಂದಿನ ವರ್ಷ ರೂ.86.02 ಕೋಟಿ ಮಾತ್ರ ವೆಚ್ಚವಾಗಿರುತ್ತದೆ. ಆದ್ದರಿಂದ, ಪ್ರಸಕ್ತ ಸಾಲಿನಲ್ಲಿ ರೂ.63.00 ಕೋಟಿ ಅನುದಾನ ಉಳಿಕೆಯಾಗಲಿದ್ದು, ಈ ಅನುದಾನವನ್ನು ಸಮಾಜ ಕಲ್ಯಾಣ ಇಲಾಖೆಗೆ, ವಿದ್ಯಾರ್ಥಿಗಳ ಪ್ರೋತ್ಸಾಹಧನಕ್ಕಾಗಿ ಉಪಯೋಗಿಸಲು ಮರುಹಂಚಿಕೆ ಮಾಡಲು ಪ್ರಸ್ತಾಪಿಸಲಾಯಿತು.

ನಿರ್ದೇಶಕರು, ಕೃಷಿ ಇಲಾಖೆ ಇವರು ಸದರಿ ಉಳಿಕೆಯಾಗುವ ಅನುದಾನವನ್ನು ಕೃಷಿ ಉಪಕರಣಗಳನ್ನು ವಿತರಿಸಲು ಮರುಹಂಚಿಕೆ ಮಾಡಲು ಕೋರಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ, ಪ್ರತಿಷ್ಠಿತ ಶಾಲೆಗಳ ವಿದ್ಯಾರ್ಥಿಗಳಿಗೆ ಶುಲ್ಕ ಭರಿಸಲು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಮತ್ತು ಪ್ರಥಮ ಬಾರಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪಿ.ಯು.ಸಿ ಮತ್ತು ಪದವಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲು ರೂ.200.00 ಕೋಟಿ ಬಾಕಿ ಇದ್ದು, ಕನಿಷ್ಟ ರೂ.150.00 ಕೋಟಿಗಳನ್ನು ಕೃಷಿ ಇಲಾಖೆಯಿಂದ ಸಮಾಜ ಕಲ್ಯಾಣ ಇಲಾಖೆಗೆ ಮರುಹಂಚಿಕೆ ಮಾಡಲು ಪ್ರಸ್ತಾಪಿಸಿದರು.

ಶ್ರೀ ಎನ್. ಮಹೇಶ್, ಮಾನ್ಯ ಸದಸ್ಯರು ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಭಾರತ ಸರ್ಕಾರದಿಂದ ರೂ.6000/- ನೀಡುತ್ತಿದ್ದು, ಈ ಯೋಜನೆಗೆ ಒಟ್ಟು ರೂ.360.00 ಕೋಟಿ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿ ಭರಿಸುವ ಅಗತ್ಯವಿದೆಯೇ? ಎಂದು ಹೇಳಿದರು.

ಸದರಿ ಯೋಜನೆಯಡಿಯಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು ಸೇರಿಸಿ ಎಸ್.ಸಿ./ಎಸ್.ಟಿ ರೈತರಿಗೆ ಒಟ್ಟು ರೂ.10,000/- ನೀಡಲಾಗುತ್ತಿದ್ದು, ಇದಕ್ಕಾಗಿ ರೂ.360.00 ಕೋಟಿ ಅನುದಾನದ ಅಗತ್ಯವಿದೆ ಎಂದು ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರು ತಿಳಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಪ್ರಸಕ್ತ ಸಾಲಿನಲ್ಲಿ ಕೃಷಿ ಇಲಾಖೆಗೆ ಒದಗಿಸಿದ ಅನುದಾನದಲ್ಲಿ ರೂ.100.00 ಕೋಟಿಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಮರುಹಂಚಿಕೆ ಮಾಡಲು ಮತ್ತು ಕೃಷಿ ಇಲಾಖೆಗೆ ಅಗತ್ಯವಿದ್ದಲ್ಲಿ ಪೂರಕ ಆಯವ್ಯಯದಲ್ಲಿ ಹೆಚ್ಚುವರಿ ಅನುದಾನವನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ / ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ)**

## 2. ತೋಟಗಾರಿಕೆ ಇಲಾಖೆ:

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 101.94 | 95.81 | 95.37 (93.56%) | 130.40 | 28.46 |
| ಟಿ.ಎಸ್.ಪಿ | 56.84 | 51.94 | 51.86 (91.22%) | 56.89 | 0.05 |
| ಒಟ್ಟು | 158.78 | 147.76 | 147.23 | 187.29 | 28.51 |

ತೋಟಗಾರಿಕೆ ಇಲಾಖೆಯಿಂದ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ ಎಂದು ಅಧ್ಯಕ್ಷರು ಕೇಳಿದಾಗ, ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಇಲಾಖೆಯ ಕಾರ್ಯಕ್ರಮಗಳ ವಿವರವನ್ನು ನೀಡಿ, ಎಸ್.ಸಿ/ಎಸ್.ಟಿ ಫಲಾನುಭವಿಗಳಿಗೆ 90% ಸಹಾಯಧನ ನೀಡಲಾಗುತ್ತದೆ ಎಂದು ಹೇಳಿದರು.

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡಿ 90% ಸಹಾಯಧನಕ್ಕೆ ಇನ್ನು 10% ಸೇರಿಸಿ ಉಚಿತವಾಗಿ ಸೌಲಭ್ಯವನ್ನು ನೀಡಲು ಸಲಹೆ ನೀಡಿದರು.

ಚರ್ಚಿಸಿ ಅಂತಿಮವಾಗಿ ಜಾರಿಯಲ್ಲಿರುವಂತೆ 90% ಸಹಾಯಧನವನ್ನು ಮುಂದುವರೆಸಲು ತೀರ್ಮಾನಿಸಲಾಯಿತು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.
(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ)**

## ೩. ರೇಷ್ಮೆ ಇಲಾಖೆ:-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 15.51 | 15.51 | 15.46 (99.67%) | 15.91 |
| ಟಿ.ಎಸ್.ಪಿ | 7.65 | 7.65 | 7.60 (99.28%) | 7.31 |
| ಒಟ್ಟು | 23.16 | 23.16 | 23.05 | 23.22 |

ರೇಷ್ಮೆ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ರೇಷ್ಮೆ ಇಲಾಖೆ)**

## 4. ಪಶು ಸಂಗೋಪನೆ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 81.68 | 79.00 | 78.99 (96.71%) | 129.00 | 47.32 |
| ಟಿ.ಎಸ್.ಪಿ | 51.54 | 51.26 | 51.25 (99.43%) | 66.81 | 15.27 |
| ಒಟ್ಟು | 133.22 | 130.27 | 130.24 | 195.81 | 62.59 |

ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಕಾರ್ಯಕ್ರಮದಲ್ಲಿ ಹಿಂದಿನ ವರ್ಷ ರೂ.118.00 ಕೋಟಿಗಳು ಮಾತ್ರ ವೆಚ್ಚವಾಗಿರುತ್ತದೆ. ಕಾರಣ, ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ರೂ.175.00 ಕೋಟಿಗಳಲ್ಲಿ ಸುಮಾರು ರೂ.53.00 ಕೋಟಿಗಳು ಉಳಿಕೆಯಾಗಲಿದ್ದು, ಸದರಿ ರೂ.50.00 ಕೋಟಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ಪ್ರೋತ್ಸಾಹಧನ ಕಾರ್ಯಕ್ರಮಗಳಿಗೆ ನೀಡಲು ಮತ್ತು ಹಿಂದೆ ಅನುಮೋದನೆಗೊಂಡಿರುವ ಅರಸೀಕೆರೆ ತಾಲ್ಲೂಕಿನ ಯೋಗನರಸಿಂಹ ಸ್ವಾಮಿ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಕ್ಕೆ ರೂ.3.00 ಕೋಟಿ ಒದಗಿಸಲು ಪ್ರಸ್ತಾಪಿಸಲಾಯಿತು.

ಉಳಿಕೆ ಅನುದಾನವನ್ನು ಮಾನ್ಯ ಪ.ಪಂಗಡಗಳ ಕಲ್ಯಾಣ ಸಚಿವರು ಹೈನುಗಾರಿಕೆಗೆ ನೀಡಬಹುದೆಂದು ತಿಳಿಸಿದರು.

ಮಾನ್ಯ ಜಲಸಂಪನ್ಮೂಲ ಸಚಿವರು ಕುರಿ/ಮೇಕೆ ಸಾಕಾಣಿಕೆಗೆ ಸಹಾಯಧನ ನೀಡಲು ಪ್ರಸ್ತಾಪಿಸಿದರು. ಮಾನ್ಯ ಸದಸ್ಯರಾದ ಶ್ರೀ ಐಹೊಳೆ ದುರ್ಯೋಧನ ಇವರು ಸಹ ಇದನ್ನು ಪ್ರಸ್ತಾಪಿಸಿದರು. ಎಸ್.ಸಿ./ಎಸ್.ಟಿ ಜನರಿಗೆ ಹಸು/ಎಮ್ಮೆ ನೀಡಿ ಹಾಲು ಉತ್ಪಾದಕರನ್ನಾಗಿ ಮಾಡುವುದು ಅಗತ್ಯವೆಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು.

ನಂತರ ಈ ಕೆಳಗಿನಂತೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

1. ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದಡಿ ಉಳಿಕೆಯಾಗುವ ರೂ.53.00 ಕೋಟಿಗಳಲ್ಲಿ ಈ ಕೆಳಗಿನಂತೆ ಉಪಯೋಗಿಸಲು ತೀರ್ಮಾನಿಸಲಾಯಿತು.
   - ರೂ.23.00 ಕೋಟಿಗಳನ್ನು ಪ.ಜಾತಿ/ಪ.ಪಂಗಡದ ಬಿ.ಪಿ.ಎಲ್ ಕುಟುಂಬಗಳಿಗೆ ಕುರಿ/ಮೇಕೆ (10+1) ಘಟಕಗಳಿಗೆ 90% (ಗರಿಷ್ಟ ರೂ.59,400/-) ಸಹಾಯಧನ ನೀಡಲು.
   - ರೂ.30.00 ಕೋಟಿಗಳನ್ನು ಹಸು/ಎಮ್ಮೆ ಘಟಕಗಳಿಗೆ 90% (ಗರಿಷ್ಟ ರೂ.54,000/-) ಸಹಾಯಧನ ನೀಡಲು.
2. ಯೋಗನರಸಿಂಹ ಸ್ವಾಮಿ ಸಹಕಾರ ಸಂಘದ ಪ್ರಸ್ತಾವನೆ ಬಗ್ಗೆ ಒಂದು ಸಂಘಕ್ಕೆ ರೂ.3.00 ಕೋಟಿ ಅನುದಾನವನ್ನು ಹಂಚಿಕೆ ಮಾಡುವುದು ಸೂಕ್ತವಲ್ಲದ ಕಾರಣ ಇದಕ್ಕೆ ಅನುಮೋದನೆ ನೀಡಿರುವುದಿಲ್ಲ.
3. ಇತರೆ ಮುಂದುವರೆದ ಕಾರ್ಯಕ್ರಮಗಳನ್ನು ಅನುಷ್ಟಾನ ಮಾಡುವುದು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಇಲಾಖೆ)**

## 5. ಮೀನುಗಾರಿಕೆ ಇಲಾಖೆ:-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 26.53 | 26.52 | 26.51 (99.89%) | 7.35 |
| ಟಿ.ಎಸ್.ಪಿ | 8.76 | 8.76 | 8.73 (99.72%) | 3.03 |
| ಒಟ್ಟು | 35.29 | 35.28 | 35.24 | 10.38 |

ಮೀನುಗಾರಿಕೆ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಮೀನುಗಾರಿಕೆ ಇಲಾಖೆ)**

## 6. ಸಾರಿಗೆ ಇಲಾಖೆ:

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 236.70 | 233.42 | 233.42 (98.61%) | 276.83 | 40.13 |
| ಟಿ.ಎಸ್.ಪಿ | 105.34 | 104.64 | 104.64 (99.34) | 118.82 | 13.48 |
| ಒಟ್ಟು | 342.04 | 338.06 | 338.06 | 395.64 | 53.6 |

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಏಜೆನ್ಸಿ ಸಲಹೆಗಾರರು, ನೋಡಲ್ ಏಜೆನ್ಸಿ ಸಭೆಯಲ್ಲಿ ಪ್ರಸ್ತಾಪಿಸಿದಂತೆ, ಪ.ಜಾತಿ/ ಪ.ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ನೀಡುವ ಕಾರ್ಯಕ್ರಮದಲ್ಲಿ 75% ಅನುದಾನವನ್ನು ಸರ್ಕಾರದಿಂದ ಹಾಗೂ 25% ಅನುದಾನವನ್ನು ಸಾರಿಗೆ ನಿಗಮಗಳಿಂದ ಈವರೆಗೂ ಭರಿಸಲಾಗುತ್ತಿದ್ದು, ನಿಗಮಗಳು ನಷ್ಟದಲ್ಲಿರುವ ಕಾರಣ ಸಾರಿಗೆ ನಿಗಮಗಳ ಪ್ರಸ್ತಾವನೆಯಂತೆ 100% ವೆಚ್ಚವನ್ನು ಸರ್ಕಾರದಿಂದ ಭರಿಸುವ ಬಗ್ಗೆ ತೀರ್ಮಾನಿಸಲು ಸಭೆಯ ಗಮನಕ್ಕೆ ತರಲಾಯಿತು.

ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು 25% ಸರ್ಕಾರದಿಂದ ಭರಿಸಬೇಕಾದಲ್ಲಿ ಹೆಚ್ಚಿನ ಅನುದಾನವನ್ನು ನೀಡಬೇಕಾಗಿದೆ. ಈ ಬಗ್ಗೆ ಇತರೆ ಇಲಾಖೆಗಳಿಗೆ ಹಂಚಿಕೆ ಮಾಡಿರುವ ಅನುದಾನದಿಂದ ಮರುಹಂಚಿಕೆ ಮಾಡಬೇಕಾಗಿರುತ್ತದೆ ಎಂದು ಹೇಳಿದರು.

ಮಾನ್ಯ ಮುಖ್ಯಮಂತ್ರಿಗಳು ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಿಂದ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಗೆ ಬರಲು ಸಾರಿಗೆ ವ್ಯವಸ್ಥೆಯನ್ನು ಮಾಡುವುದು ಅಗತ್ಯವಿದೆ ಸರ್ಕಾರ ಮತ್ತು ನಿಗಮಗಳಿಂದ 25% ಅನುದಾನವನ್ನು ಭರಿಸದೇ ಇದ್ದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ, ಉಚಿತ ಬಸ್‌ಪಾಸ್‌ಗಳಿಗೆ ತಗಲುವ ವೆಚ್ಚವನ್ನು ಸರ್ಕಾರದಿಂದ ಭರಿಸುವ ಬಗ್ಗೆ ಮತ್ತು ಯಾವ ಇಲಾಖೆಯಿಂದ ಅನುದಾನವನ್ನು ಮರುಹಂಚಿಕೆ ಮಾಡಬೇಕು ಎಂಬ ಬಗ್ಗೆ ಪರಿಶೀಲಿಸಬೇಕಾಗಿದೆ ಎಂದು ತಿಳಿಸಿದರು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ)**

## 7. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 2425.12 | 2233.65 | 2230.77 (91.99%) | 2146.29 |
| ಟಿ.ಎಸ್.ಪಿ | 1035.20 | 930.02 | 928.16 (89.66%) | 961.87 |
| ಒಟ್ಟು | 3460.33 | 3163.67 | 3158.94 | 3108.15 |

ಗ್ರಾಮೀಣ ಸುಮಾರ್ಗ/ನಮ್ಮ ಗ್ರಾಮ ನಮ್ಮ ರಸ್ತೆ ಕಾರ್ಯಕ್ರಮಕ್ಕೆ ರೂ.250.00 ಕೋಟಿಗಳನ್ನು ಒದಗಿಸಲಾಗಿದೆ. ಇದು ಡೀಮ್ಡ್ ವೆಚ್ಚವಾಗಿರುವುದರಿಂದ, ಎಸ್.ಸಿ.ಎಸ್.ಪಿ ಅಡಿ ರೂ.100.00 ಕೋಟಿ ಮತ್ತು ಟಿ.ಎಸ್.ಪಿ ಅಡಿ ರೂ.25.00 ಕೋಟಿ ಒಟ್ಟು ರೂ.125.00 ಕೋಟಿಗಳನ್ನು (50%) ಸಮಾಜ ಕಲ್ಯಾಣ ಇಲಾಖೆಯಿಂದ ಈಗಾಗಲೇ ಮಂಜೂರಾಗಿರುವ ಕಾಲೋನಿ ಅಭಿವೃದ್ಧಿ ಮತ್ತು ಸಮುದಾಯ ಭವನಗಳ ಮುಂದುವರೆದ ಕಾಮಗಾರಿಗಳಿಗೆ ಮರುಹಂಚಿಕೆ ಮಾಡಲು ಪ್ರಸ್ತಾಪಿಸಲಾಯಿತು.

ಆರ್.ಡಿ.ಪಿ.ಆರ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಸದರಿ ಯೋಜನೆಯಡಿ ಪ.ಜಾತಿ/ಪ.ಪಂಗಡದವರು 50% ಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಗ್ರಾಮಗಳಿಗೆ ಸಂಪರ್ಕ ರಸ್ತೆಯನ್ನು

ಮಾಡಲಾಗುತ್ತಿದ್ದು, ಈ ಅನುದಾನ ಸದರಿ ಕಾರ್ಯಕ್ರಮಕ್ಕೆ ಅಗತ್ಯವಿರುವ ಕಾರಣ ಮರುಹಂಚಿಕೆ ಮಾಡದಂತೆ ಕೋರಿದರು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಸದರಿ ಇಲಾಖೆಗೆ ಕಳೆದ ವರ್ಷಕ್ಕಿಂತ ಪ್ರಸಕ್ತ ಸಾಲಿನಲ್ಲಿ ರೂ.352.00 ಕೋಟಿ ಕಡಿಮೆ ಹಂಚಿಕೆಯಾಗಿರುವುದರಿಂದ ಒಟ್ಟು ಹಂಚಿಕೆಯನ್ನು ಹಾಗೆಯೇ ಮುಂದುವರೆಸಲು ಸೂಚಿಸಿದರು.

ಸ್ವಚ್ಛ ಭಾರತ ಅಭಿಯಾನದಡಿ ಪ.ಜಾತಿ/ಪ.ಪಂಗಡದವರಿಗೆ ವೈಯಕ್ತಿಕ ಶೌಚಾಲಯಕ್ಕಾಗಿ ರೂ.20,000/- ಸಹಾಯಧನ ನೀಡಲು ಹಿಂದಿನ ವರ್ಷದ ರಾಜ್ಯ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಭಾರತ ಸರ್ಕಾರದ ಪಾಲು ರೂ.12,000/- ಇದರೊಂದಿಗೆ ರಾಜ್ಯ ಸರ್ಕಾರದಿಂದ ರೂ.8,000/- ನೀಡಲು ಅನುಮೋದನೆ ನೀಡುವಂತೆ ಪ್ರಧಾನ ಕಾರ್ಯದರ್ಶಿಗಳು, ಆರ್.ಡಿ.ಪಿ.ಆರ್ ಇಲಾಖೆ ಇವರು ಕೋರಿದರು.

ಮೇಲ್ಕಂಡಂತೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)**

## 8. ಅರಣ್ಯ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 12.75 | 12.75 | 10.15 (79.66%) | 22.77 |
| ಟಿ.ಎಸ್.ಪಿ | 11.91 | 11.91 | 10.87 (91.31%) | 9.62 |
| ಒಟ್ಟು | 24.66 | 24.66 | 21.03 | 32.40 |

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಇಲಾಖೆ ಇವರು ಇಲಾಖೆಯಲ್ಲಿ ಹುಲಿ ಮತ್ತು ವನ್ಯ ಜೀವಿಗಳ ಸಂರಕ್ಷಣೆ, ಆಗ್ರೋ ಫಾರೆಸ್ಟ್ರಿ ಮತ್ತು ರಾಷ್ಟ್ರೀಯ ಬಿದಿರು ಅಭಿಯಾನ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದ್ದು, ಹೆಚ್ಚಿನ ಅನುದಾನ ಭಾರತ ಸರ್ಕಾರದಿಂದ ಒದಗಿಸಲಾಗುತ್ತಿದೆ ಎಂದು ತಿಳಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಕೋರಿದರು.

ಅದರಂತೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಇಲಾಖೆ)**

## ೯. ಸಹಕಾರ ಇಲಾಖೆ:-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 57.86 | 57.86 | 57.80 (99.89%) | 119.26 | 61.40 |
| ಟಿ.ಎಸ್.ಪಿ | 41.29 | 41.29 | 39.29 (95.16%) | 84.11 | 42.82 |
| ಒಟ್ಟು | 99.15 | 99.15 | 97.09 | 203.37 | 104.22 |

ಸದರಿ ಇಲಾಖೆಗೆ ಪ್ರಸಕ್ತ ಸಾಲಿನಲ್ಲಿ ರೂ.104.22 ಕೋಟಿಗಳನ್ನು ಹೆಚ್ಚುವರಿಯಾಗಿ ನಿಡಲಾಗಿದೆ. ಸಹಕಾರ ಇಲಾಖೆಯ ಪ್ರಸ್ತಾವನೆಯಂತೆ ಬೆಳೆ ಸಾಲಕ್ಕೆ ಬಡ್ಡಿ ಸಹಾಯಧನ ಯೋಜನೆಯಡಿ ರೂ.175.00 ಕೋಟಿ ಒದಗಿಸಿದ್ದು, ಸದರಿ ಯೋಜನೆಯಡಿ ರೂ.47.00 ಕೋಟಿಗಳು (ಎಸ್.ಸಿ.ಎಸ್.ಪಿ- ರೂ.13.00 ಕೋಟಿ, ಟಿ.ಎಸ್.ಪಿ - ರೂ.34.00 ಕೋಟಿ) ಉಳಿಕೆಯಾಗುತ್ತದೆ.

ಉಳಿಕೆಯಾಗುವ ರೂ.47.00 ಕೋಟಿಗಳನ್ನು ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ಪ್ರಬುದ್ಧ ಯೋಜನೆ ಹಾಗೂ ಸಂಘ ಸಂಸ್ಥೆಗಳಿಗೆ ಧನಸಹಾಯ ನೀಡಲು ಸಮಾಜ ಕಲ್ಯಾಣ ಇಲಾಖೆಗೆ ಮರುಹಂಚಿಕೆ ಮಾಡಲು ಪ್ರಸ್ತಾಪಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ಇವರು ಯಶಸ್ವಿನಿ ಯೋಜನೆಯನ್ನು ಪ್ರಸಕ್ತ ಸಾಲಿನಿಂದ ಪ್ರಾರಂಭಿಸಿದ್ದು, ಉಳಿಕೆಯಾಗುವ ರೂ.47.00 ಕೋಟಿಗಳನ್ನು ಈ ಕಾರ್ಯಕ್ರಮಕ್ಕೆ ಉಪಯೋಗಿಸಲು ಅನುಮೋದನೆ ನೀಡುವಂತೆ ಕೋರಿದರು.

ಸಹಕಾರಿ ಸಂಘಗಳಲ್ಲಿ ಎಷ್ಟು ಎಸ್.ಸಿ/ಎಸ್.ಟಿ ಸದಸ್ಯರಿದ್ದಾರೆ ಎಂದು ಪ್ರಶ್ನಿಸಿದಾಗ, ಪ್ರಧಾನ ಕಾರ್ಯದರ್ಶಿಗಳು ಒಟ್ಟು 41.71 ಲಕ್ಷ ಎಸ್.ಸಿ/ ಎಸ್.ಟಿ ಸದಸ್ಯರಿರುತ್ತಾರೆ ಎಂದು ತಿಳಿಸಿ, ಇವರಿಗೆ ಯಶಸ್ವಿನಿ ಯೋಜನೆಯಡಿ ಸೌಲಭ್ಯ ಒದಗಿಸಲು ಈ ಅನುದಾನದ ಅಗತ್ಯವಿದೆ ಎಂದು ತಿಳಿಸಿದರು.

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡಿ ಎಸ್.ಸಿ/ಎಸ್.ಟಿ ಜನರನ್ನು ಸಹಕಾರಿ ಬ್ಯಾಂಕ್‌ಗಳಲ್ಲಿ ಷೇರುದಾರರನ್ನಾಗಿ ಮಾಡಲು ಕ್ರಮವಹಿಸುವಂತೆ ಮತ್ತು 41.71 ಲಕ್ಷ ಸದಸ್ಯರಿರುವ ಬಗ್ಗೆ ಮರುಪರಿಶೀಲಿಸಿ ಮಾಹಿತಿ ಒದಗಿಸುವಂತೆ ಹಾಗೂ ಸದಸ್ಯತ್ವ ಶುಲ್ಕ ಸರ್ಕಾರದಿಂದ ಭರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಎಸ್.ಸಿ/ಎಸ್.ಟಿ ಜನರನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ಮಾಡಲು ಕ್ರಮವಹಿಸುವಂತೆ ತಿಳಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಎಸ್.ಸಿ/ಎಸ್.ಟಿ ಜನರು ಸಹಕಾರ ಸಂಘಗಳಲ್ಲಿ ಸದಸ್ಯರಾಗಿದ್ದಲ್ಲಿ ಮಾತ್ರ ಯಶಸ್ವಿನಿ ಯೋಜನೆಯಲ್ಲಿ ಸೌಲಭ್ಯ ನೀಡಲು ಅವಕಾಶವಿದೆ. ಪ.ಜಾತಿ/ಪ.ಪಂಗಡದ ರೈತರ ಆರೋಗ್ಯದ ಬಗ್ಗೆ ಮುಖ್ಯವಾಗಿ ಗಮನಹರಿಸಬೇಕಾಗಿದ್ದು, ಸದರಿ ಜನರನ್ನು ಮೊದಲು ಸಹಕಾರ ಸಂಘಗಳ ಸದಸ್ಯರನ್ನಾಗಿ ಮಾಡಿ ಯಶಸ್ವಿನಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವಂತೆ ಮತ್ತು ಫಲಾನುಭವಿಗಳ ಬಗ್ಗೆ ಪ್ರತ್ಯೇಕವಾಗಿ ಮಾಹಿತಿಯನ್ನು ನಿರ್ವಹಿಸಲು ಸೂಚಿಸಿದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನಕಾರ್ಯದರ್ಶಿ, ಸಹಕಾರ ಇಲಾಖೆ)**

## 10. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 49.15 | 49.15 | 49.12 (99.95%) | 49.97 | 0.82 |
| ಟಿ.ಎಸ್.ಪಿ | 24.12 | 24.12 | 24.10 (99.93%) | 24.46 | 0.34 |
| ಒಟ್ಟು | 73.27 | 73.27 | 73.22 | 74.42 | 1.15 |

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ 25% ಎಸ್.ಸಿ./ಎಸ್.ಟಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿರುವುದರಿಂದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಅನುದಾನ ನೀಡಲಾಗುತ್ತಿದೆ ಎಂದು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಏಜೆನ್ಸಿ ಸಲಹೆಗಾರರು ಸಭೆಯ ಗಮನಕ್ಕೆ ತಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನದಿಂದ ರೂ.43.00 ಕೋಟಿಗಳನ್ನು ವಿದ್ಯಾರ್ಥಿನಿಲಯ ಹಾಗೂ ವಸತಿಶಾಲೆಗಳ ಮುಂದುವರೆದ ಕಟ್ಟಡ ಕಾಮಗಾರಿಗಳಿಗೆ ಮತ್ತು ಪ್ರಸಕ್ತ ಸಾಲಿನಲ್ಲಿ 10 ಕನಕದಾಸ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಮಾಡಲು ಹಂಚಿಕೆಯಾದ ಅನುದಾನವನ್ನು ಬಳಕೆಮಾಡಲಾಗುವುದು ಎಂದು ತಿಳಿಸಿದರು.

ಅದರಂತೆ, ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)**

## 11. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 556.11 | 555.04 | 555.04 (99.81%) | 494.94 |
| ಟಿ.ಎಸ್.ಪಿ | 218.29 | 216.37 | 216.35 (99.11%) | 229.90 |
| ಒಟ್ಟು | 774.40 | 771.41 | 771.39 | 724.84 |

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು ಮೇಲ್ಕಂಡ ಅನುದಾನದಿಂದ ಮುಖ್ಯವಾಗಿ ರೂ.630.00 ಕೋಟಿಗಳನ್ನು ಐ.ಸಿ.ಡಿ.ಎಸ್ ಕಾರ್ಯಕ್ರಮಕ್ಕೆ ಮತ್ತು ಉಳಿದ ಅನುದಾನವನ್ನು ಭಾಗ್ಯಲಕ್ಷ್ಮಿ, ವಿಕಲಚೇತನರ ಅಭಿವೃದ್ಧಿ ಇತ್ಯಾದಿ ಮುಂದುವರೆದ ಕಾರ್ಯಕ್ರಮಗಳಿಗೆ ಬಳಸಲಾಗುತ್ತಿದೆ ಎಂದು ತಿಳಿಸಿದರು.

ಅದರಂತೆ, ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)**

## 12. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 6.58 | 6.58 | 6.29 (95.65%) | 20.88 | 14.30 |
| ಟಿ.ಎಸ್.ಪಿ | 0.60 | 0.60 | 0.60 (100%) | 10.56 | 9.96 |
| ಒಟ್ಟು | 7.18 | 7.18 | 6.89 | 31.43 | 24.25 |

ಪ್ರಸಕ್ತ ಸಾಲಿನಲ್ಲಿ ವಾರ್ತಾ ಇಲಾಖೆಗೆ ಹೆಚ್ಚುವರಿ ಅನುದಾನವನ್ನು ಒದಗಿಸಿದ್ದು, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ್ ರಾಂ ರವರ ಜನ್ಮ ದಿನಾಚರಣೆ ಮತ್ತು ಪುಣ್ಯ ತಿಥಿ ಹಾಗೂ ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಸಮಾಜ ಕಲ್ಯಾಣ/ ಪ.ಪಂಗಡದ ಕಲ್ಯಾಣ ಇಲಾಖೆಯಿಂದ ನೀಡುವ ಜಾಹೀರಾತು ವೆಚ್ಚವನ್ನು ಮತ್ತು ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಪ್ರಚಾರ ಇತ್ಯಾದಿಗಳ ಬಗ್ಗೆ ವಿನಿಯೋಗಿಸಲು ಪ್ರಸ್ತಾಪಿಸಲಾಯಿತು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಎಲ್ಲಾ ಪ್ರಸ್ತಾವನೆಗಳನ್ನು ಕ್ರಿಯಾ ಯೋಜನೆಗೆ ಸೇರಿಸಿಕೊಂಡು ಅನುಮೋದನೆ ನೀಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದರು.

ಅದರಂತೆ, ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.
(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ)**

## 13. ಪ್ರವಾಸೋದ್ಯಮ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 2.92 | 2.25 | 2.25 (76.97%) | 2.00 |
| ಟಿ.ಎಸ್.ಪಿ | 1.95 | 0.94 | 0.94 (48.08%) | 1.00 |
| ಒಟ್ಟು | 4.87 | 3.19 | 3.19 | 3.00 |

ಪ್ರವಾಸೋದ್ಯಮ ಇಲಾಖೆಯಡಿ ಎಸ್.ಸಿ/ಎಸ್.ಟಿ ಶಾಲಾ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಅನುದಾನ ಹಂಚಿಕೆಯಾಗಿರುತ್ತದೆ. ಕಳೆದ ಎರಡು ವರ್ಷಗಳಲ್ಲಿ ಕೋವಿಡ್ ಕಾರಣದಿಂದಾಗಿ ಕರ್ನಾಟಕ ದರ್ಶನ ಕಾರ್ಯಕ್ರಮವನ್ನು ಅನುಷ್ಠಾನ ಮಾಡಿರುವುದಿಲ್ಲ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡಿ ವಾರ್ತಾ ಇಲಾಖೆಗೆ ಹೆಚ್ಚಿನ ಅನುದಾನ ನೀಡಿದ್ದು, ಪ್ರವಾಸೋದ್ಯಮ ಇಲಾಖೆಯಿಂದ ಟ್ಯಾಕ್ಸಿಗಳಿಗೆ ಸಹಾಯಧನ ನೀಡುವುದರಿಂದ ಜನರಿಗೆ ಉಪಯೋಗವಾಗುತ್ತದೆ ಎಂದು ಹೇಳಿದರು.

ಟ್ಯಾಕ್ಸಿಗಳಿಗೆ ಸಹಾಯಧನ ನೀಡುವ ಕಾರ್ಯಕ್ರಮ ಹಿಂದೆ ಈ ಇಲಾಖೆಯಿಂದ ಅನುಷ್ಠಾನ ಮಾಡುತ್ತಿದ್ದು, ಈಗ ಸ್ಥಗಿತಗೊಂಡಿದೆ ಎಂದು ಸಭೆಯ ಗಮನಕ್ಕೆ ತರಲಾಯಿತು.

ಅಪರ ಮುಖ್ಯ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಇವರು, ಟ್ಯಾಕ್ಸಿಗಳಿಗೆ ಸಹಾಯಧನ ನೀಡುವ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖೆಯ ನಿಗಮಗಳಿಂದಲೂ ಅನುಷ್ಠಾನ

ಮಾಡಲಾಗುತ್ತಿದೆ. ಆದ್ದರಿಂದ, ಪ್ರಸ್ತುತ ಪ್ರವಾಸೋದ್ಯಮ ಇಲಾಖೆಯಲ್ಲಿ ಸದರಿ ಯೋಜನೆ ಇರುವುದಿಲ್ಲ ಎಂದು ತಿಳಿಸಿದರು.

ಅದರಂತೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಟ್ಯಾಕ್ಸಿಗೆ ಸಹಾಯಧನ ನೀಡುವ ಕಾರ್ಯಕ್ರಮವನ್ನು ಪುನರ್ ಪ್ರಾರಂಭಿಸಬೇಕಾದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಪ್ರಸ್ತಾವನೆ ಸಲ್ಲಿಸಬಹುದಾಗಿದೆ.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ)**

## 14. ಯುವ ಸಬಲೀಕರಣ ಮತ್ತು ಕ್ರೀಡಾಇಲಾಖೆ:-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 8.27 | 8.27 | 8.27 (100%) | 7.50 |
| ಟಿ.ಎಸ್.ಪಿ | 2.74 | 2.74 | 2.74 (100%) | 2.50 |
| ಒಟ್ಟು | 11.02 | 11.02 | 11.00 | 10.00 |

ಸದರಿ ಇಲಾಖೆಯ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳಾಗಿರುತ್ತದೆ ಎಂದು ಸರ್ಕಾರದ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ ಇವರು ತಿಳಿಸಿದರು. ಅದರಂತೆ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ).**

## 15. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 416.19 | 416.19 | 416.03 (99.96%) | 587.83 | 171.64 |
| ಟಿ.ಎಸ್.ಪಿ | 178.00 | 178.00 | 177.46 (99.70%) | 240.09 | 62.09 |
| ಒಟ್ಟು | 594.20 | 594.20 | 593.49 | 827.92 | 233.72 |

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿ ರೂ.233.72 ಕೋಟಿಗಳನ್ನು ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ ಹಂಚಿಕೆ ಮಾಡಲಾಗಿದೆ.

ಮಾನ್ಯ ಸದಸ್ಯರಾದ ಶ್ರೀ. ಎನ್. ಮಹೇಶ್ ಇವರು ಎಸ್.ಸಿ/ ಎಸ್.ಟಿ ಬಿ.ಪಿ.ಎಲ್ ಕಾರ್ಡ್‌ದಾರರ ಒಟ್ಟು ಸಂಖ್ಯೆ 24 ಲಕ್ಷ ಎಂದು ಮಾಹಿತಿ ನೀಡಿದ್ದು, ಇಂಧನ ಇಲಾಖೆಯಲ್ಲಿ 36 ಲಕ್ಷ ಕುಟುಂಬಗಳು ಇವೆ ಎಂಬ ಬಗ್ಗೆ ಮಾಹಿತಿಯಿರುತ್ತದೆ. ಅಲ್ಲದೇ ಸಹಕಾರ ಇಲಾಖೆಯಲ್ಲಿ 41.71 ಲಕ್ಷ ಪ.ಜಾತಿ/ಪ.ಪಂಗಡದ ಸದಸ್ಯರು ಇರುತ್ತಾರೆ ಎಂದು ತಿಳಿಸಿದ್ದು, ಈ ಮಾಹಿತಿಯು ಒಂದಕ್ಕೊಂದು ತಾಳೆಯಾಗುತ್ತಿಲ್ಲ ಎಂದು ಹೇಳಿದರು.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಮಾಹಿತಿಯಂತೆ ಕೆ.ವೈ.ಸಿ ಅಡಿ ಪ.ಜಾತಿ/ಪ.ಪಂಗಡಗಳ ಬಿ.ಪಿ.ಎಲ್ ಕಾರ್ಡ್‌ದಾರರ ಮಾಹಿತಿಯನ್ನು ಸಂಗ್ರಹಿಸುವ ಕಾರ್ಯ

ಪ್ರಗತಿಯಲ್ಲಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಬಿ.ಪಿ.ಎಲ್ ಕಾರ್ಡ್‌ದಾರರ ಸಂಖ್ಯೆ ಹೆಚ್ಚಾಗಬಹುದೆಂದು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಏಜೆನ್ಸಿ ಸಲಹೆಗಾರರು ಸಭೆಯ ಗಮನಕ್ಕೆ ತಂದರು.

ಅಪರ ಮುಖ್ಯ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಇವರು, ಬಿ.ಪಿ.ಎಲ್ ಕಾರ್ಡ್‌ದಾರರಿಗೆ ಒಂದು ಕೆ.ಜಿ ಅಕ್ಕಿಯನ್ನು ಹೆಚ್ಚುವರಿಯಾಗಿ ಪ್ರಸಕ್ತ ಸಾಲಿನಿಂದ ನೀಡುತ್ತಿರುವ ಕಾರಣ ಹೆಚ್ಚುವರಿ ಅನುದಾನವನ್ನು ಒದಗಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಎಷ್ಟು ಎಸ್.ಸಿ/ಎಸ್.ಟಿ ಬಿ.ಪಿ.ಎಲ್ ಕಾರ್ಡ್‌ದಾರರು ಇದ್ದಾರೆ ಎಂಬ ಬಗ್ಗೆ ನಿಖರ ಮಾಹಿತಿ ಪಡೆದು ತಿಳಿಸಬೇಕೆಂದು ನಿರ್ದೇಶನ ನೀಡಿದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ)**

## 16. ಕಂದಾಯ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 2153.65 | 2153.65 | 2134.24 (99.10%) | 2779.41 | 625.76 |
| ಟಿ.ಎಸ್.ಪಿ | 820.00 | 820.00 | 803.31 (97.97%) | 969.00 | 149.00 |
| ಒಟ್ಟು | 2973.65 | 2973.65 | 2937.55 | 3748.41 | 774.76 |

ಮಾಸಿಕ ಪಿಂಚಣಿ ದರಗಳನ್ನು ಹೆಚ್ಚಿಸಿರುವ ಕಾರಣ ಪ್ರಸಕ್ತ ಸಾಲಿನಲ್ಲಿ ಹೆಚ್ಚಿನ ಅನುದಾನ ಒದಗಿಸಲಾಗಿದೆ ಎಂದು ಸರ್ಕಾರದ ಕಾರ್ಯದರ್ಶಿ ಸಮಾಜ ಕಲ್ಯಾಣ ಇಲಾಖೆ ಇವರು ತಿಳಿಸಿದರು.

ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಒಟ್ಟು ಅನುದಾನದಲ್ಲಿ ರೂ.3639.97 ಕೋಟಿಗಳನ್ನು ವಿವಿಧ ಪಿಂಚಣಿ ಕಾರ್ಯಕ್ರಮಗಳಿಗೆ ಮತ್ತು ಮಾಜಿ ದೇವದಾಸಿಯರಿಗೆ, ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ವಿಧವೆಯರಿಗೆ, ಮನಸ್ವಿನಿ ಯೋಜನೆಯ ಫಲಾನುಭವಿಗಳಿಗೆ ಪಿಂಚಣಿ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುತ್ತದೆ. ಉಳಿದ ಅನುದಾನವನ್ನು ಆರಾಧನಾ ಮತ್ತು ರಾಷ್ಟ್ರೀಯ ಕುಟುಂಬ ಸೌಲಭ್ಯ ಯೋಜನೆಗೆ ಬಳಸಲಾಗುವುದು ಎಂದು ತಿಳಿಸಿದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.
(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ)**

## 17. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ:-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 2.00 | 2.00 | 2.00 (100%) | 4.12 | 2.12 |
| ಟಿ.ಎಸ್.ಪಿ | 0.50 | 0.50 | 0.50 (100%) | 1.67 | 1.17 |
| ಒಟ್ಟು | 2.50 | 2.50 | 2.50 | 5.79 | 3.29 |

ಉನ್ನತಿ ಕಾರ್ಯಕ್ರಮ ಅಡಿ (ಅಮೃತ ಯೋಜನೆ ಒಳಗೊಂಡಂತೆ) ಪ.ಜಾತಿ/ಪ.ಪಂಗಡದ ಅಭ್ಯರ್ಥಿಗಳಿಗೆ ಸ್ಟಾರ್ಟ್ ಅಪ್/ಇನ್ನೊವೇಟಿವ್ ಘಟಕಗಳಿಗೆ ಪ್ರೋತ್ಸಾಹಧನ ಗರಿಷ್ಟ ರೂ.50.00 ಲಕ್ಷ ನೀಡಲು ಹಾಗೂ ಸದರಿ ಸಂಸ್ಥೆ/ ಕಂಪನಿಗಳಲ್ಲಿ ಕನಿಷ್ಠ 70% ಎಸ್.ಸಿ/ಎಸ್.ಟಿ. ಷೇರುದಾರರು ಇರಬೇಕೆಂದು ತಿಳಿಸಲಾಯಿತು.

ಮಾನ್ಯ ಮುಖ್ಯಮಂತ್ರಿಗಳು ಸಹಾಯಧನ ಪಡೆದ ಸ್ಟಾರ್ಟ್ ಅಪ್‌ಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡಲು ಸೂಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ)**

## 18. ವಸತಿ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 953.60 | 734.11 | 734.11 (76.98%) | 1158.18 |
| ಟಿ.ಎಸ್.ಪಿ | 154.23 | 69.23 | 69.23 (44.89%) | 99.24 |
| ಒಟ್ಟು | 1107.83 | 803.34 | 803.34 | 1257.42 |

ವಸತಿ ಇಲಾಖೆಯಡಿ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಹೊಸದಾಗಿ ಮಂಜೂರು ಮಾಡುವ ಮನೆಗಳಿಗೆ ಸಹಾಯಧನವನ್ನು ರೂ.1.75 ಲಕ್ಷಗಳಿಂದ ರೂ.2.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ ಎಂದು ಸಭೆಯ ಗಮನಕ್ಕೆ ತರಲಾಯಿತು.

ಕಾರ್ಯದರ್ಶಿ ವಸತಿ ಇಲಾಖೆ ಇವರು, ಕೊಳಚೆ ಅಭಿವೃದ್ಧಿ ಮಂಡಳಿ ವತಿಯಿಂದ ನಗರ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿರುವ ಮನೆಗಳಿಗೆ ಫಲಾನುಭವಿಗಳ ವಂತಿಕೆ ರೂ.1.50 ಲಕ್ಷಗಳಿದ್ದು, ಅದರಲ್ಲಿ ರೂ.75,000/-ಗಳನ್ನು ಸರ್ಕಾರದಿಂದ ಭರಿಸಲು ಹಿಂದಿನ ವರ್ಷದಲ್ಲಿ ಆದೇಶವಾಗಿದ್ದು, ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿ ನಗರ ಸ್ಥಳೀಯ ಸಂಸ್ಥೆಗಳಿಗೆ ಒದಗಿಸಿರುವ ಅನುದಾನದಲ್ಲಿ ಸದರಿ ರೂ.75,000/-ಗಳನ್ನು ನೇರವಾಗಿ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ನೀಡಲು ಕೋರಿದರು.

ಸದರಿ ವಿಷಯವನ್ನು ನಗರಾಭಿವೃದ್ಧಿ ಇಲಾಖೆಯ ವಿಷಯ ಬಂದಾಗ ಪ್ರಸ್ತಾಪಿಸಲು ಸೂಚಿಸಲಾಯಿತು.

ವಸತಿ ಇಲಾಖೆಗೆ ಹಂಚಿಕೆಯಾದ ಅನುದಾನವನ್ನು ಅಪೂರ್ಣಗೊಂಡಿರುವ ಮನೆಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಲು ಕ್ರಮಕೈಗೊಳ್ಳುವಂತೆ ವಸತಿ ಇಲಾಖೆ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ)**

## 19. ಉನ್ನತ ಶಿಕ್ಷಣ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 180.84 | 180.84 | 177.62 (98.22%) | 207.49 | 26.65 |
| ಟಿ.ಎಸ್.ಪಿ | 41.96 | 41.96 | 39.05 (93.08%) | 80.34 | 38.38 |
| ಒಟ್ಟು | 222.80 | 222.80 | 216.67 | 287.83 | 65.03 |

ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆಗೆ ಒದಗಿಸಿದ ಅನುದಾನದಲ್ಲಿ ರೂ.200 ಕೋಟಿ ಅನುದಾನವನ್ನು ಕಾಲೇಜು ಕಟ್ಟಡ ನಿರ್ಮಾಣಕ್ಕೆ ಹಂಚಿಕೆ ಮಾಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಆದರೆ, ಕೆಲವು ವಿಶ್ವವಿದ್ಯಾಲಯಗಳಿಂದ ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮತ್ತು ಲ್ಯಾಪ್‌ಟಾಪ್‌ಗಳಿಗಾಗಿ ರೂ.100 ಕೋಟಿ ಅನುದಾನ ಹೆಚ್ಚುವರಿಯಾಗಿ ನೀಡಲು ಬೇಡಿಕೆ ಸಲ್ಲಿಸಿರುತ್ತಾರೆ ಎಂದು ತಿಳಿಸಿದರು.

ಅಪರ ಮುಖ್ಯ ಕಾರ್ಯದರ್ಶಿ ಆರ್ಥಿಕ ಇಲಾಖೆ ಇವರು ಮಾತನಾಡಿ ಲ್ಯಾಪ್‌ಟಾಪ್‌ಗಳನ್ನು ಪ್ರಸ್ತುತ ನೀಡುತ್ತಿಲ್ಲವೆಂದು ತಿಳಿಸುತ್ತಾ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಮಾತ್ರ ನೀಡಿದ್ದಲ್ಲಿ ಉಳಿದ ವಿದ್ಯಾರ್ಥಿಗಳು ಕೂಡ ಬೇಡಿಕೆಯಿಡುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಎನ್. ಮಹೇಶ್ ಇವರು, ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಪ್ರೋತ್ಸಾಹ ನೀಡಬೇಕಾಗಿರುವುದರಿಂದ ಲ್ಯಾಪ್‌ಟಾಪ್‌ಗಳನ್ನು ಒದಗಿಸಬೇಕಾಗಿದೆ ಮತ್ತು ಇತರೆ ವಿದ್ಯಾರ್ಥಿಗಳ ಬೇಡಿಕೆಯ ಬಗ್ಗೆ ಸರ್ಕಾರ ಸೂಕ್ತವಾಗಿ ಪರಿಶೀಲಿಸಬಹುದು. ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ನೀಡಲು ಒತ್ತಾಯಿಸಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು, ಲ್ಯಾಪ್‌ಟಾಪ್ ಮತ್ತು ಪಿ.ಹೆಚ್.ಡಿ ಶಿಷ್ಯವೇತನಕ್ಕಾಗಿ ಎಲ್ಲಾ ವಿಶ್ವವಿದ್ಯಾಲಯಗಳಿಂದ ಬೇಡಿಕೆಗಳು ಬರುತ್ತಿದ್ದು, ಅಗತ್ಯ ಅನುದಾನ ನೀಡುವುದು ಸೂಕ್ತವೆಂದು ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿ 7 ವಿಶ್ವವಿದ್ಯಾಲಯಗಳಿಗೆ ಸೇರಿ ಒಟ್ಟು ರೂ.1.47 ಕೋಟಿ ಅನುದಾನ ಒದಗಿಸಲಾಗಿದೆ. ಉಳಿದ ವಿಶ್ವವಿದ್ಯಾಲಯಗಳಿಗೆ ಅನುದಾನ ಒದಗಿಸಿರುವುದಿಲ್ಲ. ಎಲ್ಲಾ ವಿಶ್ವವಿದ್ಯಾಲಯಗಳು ಅನುದಾನ ಒದಗಿಸಲು ಸಮಾಜ ಕಲ್ಯಾಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುತ್ತಿದ್ದಾರೆ ಎಂದು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಏಜೆನ್ಸಿ ಸಲಹೆಗಾರರು ಸಭೆಯ ಗಮನಕ್ಕೆ ತಂದರು.

ಎಲ್ಲಾ ವಿಶ್ವವಿದ್ಯಾಲಯಗಳಿಗೆ ಅನುದಾನ ನೀಡಬೇಕೆಂದು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿದರು.

ಖಾಸಗಿ ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಸರ್ಕಾರದಿಂದ ನೀಡುತ್ತಿಲ್ಲವೆಂದು ಸಭೆಯಲ್ಲಿ ಪ್ರಸ್ತಾಪವಾಗಿದ್ದು, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮ್ಯಾನೇಜ್‌ಮೆಂಟ್/ಎನ್.ಆರ್.ಐ ಕೋಟಾಗಳಲ್ಲಿ ಪ್ರವೇಶ ಪಡೆದಿದ್ದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದಡಿ ಭಾರತ ಸರ್ಕಾರದಿಂದ ವಿದ್ಯಾರ್ಥಿವೇತನ ಮೊತ್ತದಲ್ಲಿ 60% ಭರಿಸಲಾಗುತ್ತಿದ್ದು, ಭಾರತ ಸರ್ಕಾರದ ಮಾರ್ಗಸೂಚಿಗಳಲ್ಲಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲವೆಂದು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಏಜೆನ್ಸಿ ಸಲಹೆಗಾರರು ಸಭೆಯ ಗಮನಕ್ಕೆ ತಂದರು.

ಮ್ಯಾನೇಜ್‌ಮೆಂಟ್/ ಎನ್.ಆರ್.ಐ ಕೋಟಾದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಮೆರಿಟ್ ಆಧಾರದಲ್ಲಿ ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಯೋಜನೆಯಂತೆ ಅರ್ಹ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿಸಲು ಅವಕಾಶವಿದೆ ಎಂದು ಸಭೆಯ ಗಮನಕ್ಕೆ ತರಲಾಯಿತು.

ಅಂತಿಮವಾಗಿ ಚರ್ಚಿಸಿ ಮಾನ್ಯ ಮುಖ್ಯಮಂತ್ರಿಗಳು, ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ಎಸ್.ಸಿ/ ಎಸ್.ಟಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಮತ್ತು ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲು ಕ್ರಮವಹಿಸುವಂತೆ ಸೂಚಿಸಿದರು. ಇದಕ್ಕೆ ಹೆಚ್ಚಿನ ಅನುದಾನ ಅಗತ್ಯದ ಬಗ್ಗೆ ಪರಿಶೀಲಿಸಿ ಪ್ರಸ್ತಾವನೆ ಮಂಡಿಸಲು ಸಮಾಜ ಕಲ್ಯಾಣ ಇಲಾಖೆಗೆ ಸೂಚಿಸಿದರು.

ಎಸ್.ಸಿ/ಎಸ್.ಟಿ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲು ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷ ನಿಗದಿಪಡಿಸಿದ್ದು, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷ ನಿಗದಿಪಡಿಸಲಾಗಿದೆ. ಎಸ್.ಸಿ/ ಎಸ್.ಟಿ ವಿದ್ಯಾರ್ಥಿಗಳಿಗೆ ಆದಾಯ ಮಿತಿಯನ್ನು ಹೆಚ್ಚಿಸುವಂತೆ ಮಾನ್ಯ ಸದಸ್ಯರಾದ ಶ್ರೀ.ಎನ್.ಮಹೇಶ್ ಇವರು ಪ್ರಸ್ತಾಪಿಸಿದರು.

ಹಿಂದುಳಿದ ವರ್ಗದವರಿಗೆ ಕೆನೆಪದರ ನೀತಿಯಡಿ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಪಡೆಯಲು ರೂ.8.00 ಲಕ್ಷ ಆದಾಯ ಮಿತಿಯನ್ನು ನಿಗದಿಪಡಿಸಿದ್ದು, ಇದು ವಿದ್ಯಾರ್ಥಿವೇತನಕ್ಕೆ ಅನ್ವಯಿಸುವುದಿಲ್ಲ ಎಂದು ಮತ್ತು ಎಸ್.ಸಿ/ಎಸ್.ಟಿ ಅಭ್ಯರ್ಥಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪಡೆಯಲು ಆದಾಯ ಮಿತಿ ಇರುವುದಿಲ್ಲವೆಂದು ಸಭೆಯ ಗಮನಕ್ಕೆ ತರಲಾಯಿತು. ಸದರಿ ವಿಷಯದ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರತ್ಯೇಕವಾಗಿ ಸ್ಪಷ್ಟೀಕರಣ ನೀಡುವಂತೆ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ)**

## 20. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 800.59 | 798.56 | 797.41 (99.60%) | 645.69 |
| ಟಿ.ಎಸ್.ಪಿ | 344.19 | 344.19 | 343.51 (99.80%) | 338.97 |
| ಒಟ್ಟು | 1144.79 | 1142.75 | 1140.93 | 984.65 |

ಸರ್ಕಾರದ ಪ್ರಧಾನ ಕಾರ್ಯದರ್ಶಿ ಪ್ರಾಥಮಿಕ ಮತ್ತು ಫ್ರೌಢಶಿಕ್ಷಣ ಇಲಾಖೆ ಇವರು, ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿಯಲ್ಲಿ ಹಿಂದಿನ ವರ್ಷಕ್ಕಿಂತ ಪ್ರಸಕ್ತ ಸಾಲಿನಲ್ಲಿ ರೂ. 160 ಕೋಟಿ ಕಡಿಮೆಯಾಗಿರುತ್ತದೆ ಮತ್ತು ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಿದ ಕಾರ್ಯಕ್ರಮಗಳಿಗೆ ಈ ಅನುದಾನವನ್ನು ಉಪಯೋಗಿಸಲಾಗುತ್ತದೆ ಎಂದು ತಿಳಿಸಿದರು.

50% ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಇರುವ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಿಗೆ ಅನುದಾನ ಒದಗಿಸುವ ಬಗ್ಗೆ ಮೇಲ್ಕಂಡ ಇಲಾಖೆಯಿಂದ ಪ್ರಸ್ತಾಪಿಸಲಾಗಿದೆ ಎಂದು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಏಜೆನ್ಸಿ ಸಲಹೆಗಾರರು ತಿಳಿಸಿದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.
(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ)**

## 21. ಕೈಮಗ್ಗ ಮತ್ತು ಜವಳಿ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 52.88 | 52.61 | 52.52 (99.33%) | 80.84 | 27.96 |
| ಟಿ.ಎಸ್.ಪಿ | 13.53 | 13.24 | 12.02 (88.83%) | 36.93 | 23.40 |
| ಒಟ್ಟು | 66.41 | 65.85 | 64.54 | 117.77 | 51.36 |

ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಇವರು, ಕೈಮಗ್ಗ ಮತ್ತು ಜವಳಿ ಘಟಕಗಳಿಗೆ ಸಹಾಯಧನ ನೀಡಲು ಪ್ರಸಕ್ತ ಸಾಲಿನಲ್ಲಿ ರೂ.51.36 ಕೋಟಿಗಳನ್ನು ಹೆಚ್ಚುವರಿಯಾಗಿ ನೀಡಲಾಗಿದೆ ಎಂದು ತಿಳಿಸಿದರು.

ಅದರಂತೆ, ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.
(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಕೈಮಗ್ಗ ಮತ್ತು ಜವಳಿ ಇಲಾಖೆ)**

## 22. ಸಣ್ಣ ಕೈಗಾರಿಕೆ ಇಲಾಖೆ:

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 272.59 | 272.59 | 272.49 (99.96%) | 196.53 |
| ಟಿ.ಎಸ್.ಪಿ | 43.58 | 43.58 | 43.50 (99.82%) | 25.95 |
| ಒಟ್ಟು | 316.17 | 316.17 | 315.99 | 222.48 |

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕೆ.ಐ.ಎ.ಡಿ.ಬಿ ಮತ್ತು ಕೆ.ಎಸ್.ಎಸ್.ಐ.ಡಿ.ಸಿ ಯಲ್ಲಿ ಕೈಗಾರಿಕಾ ನಿವೇಶನ/ಶೆಡ್‌ಗಳಿಗೆ ಪ.ಜಾತಿ/ಪ.ಪಂಗಡದ ಉದ್ಯಮಿಗಳಿಗೆ 75% ವರೆಗೆ ಸಹಾಯಧನ ನೀಡಲಾಗುತ್ತಿದ್ದು, ಒಂದು ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ನಿವೇಶನ/ಶೆಡ್‌ಗಳನ್ನು ಪಡೆದ ಫಲಾನುಭವಿಗಳೇ, ಬೇರೆ ಕೈಗಾರಿಕಾ ಪ್ರದೇಶಗಳಲ್ಲೂ ಸಹ ನಿವೇಶನ/ಶೆಡ್‌ಗಳನ್ನು ಪಡೆಯುತ್ತಿದ್ದಾರೆ. ಮತ್ತು ಆರ್ಥಿಕವಾಗಿ ಅನುಕೂಲ ಹೊಂದಿರುವವರು ಮಾತ್ರ ಈ ಸೌಲಭ್ಯವನ್ನು ಪಡೆಯುತ್ತಿದ್ದು, ಈ ಬಗ್ಗೆ ಪರಿಶೀಲಿಸುವಂತೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿದರು.

ಈ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದ್ದು, ಮಾನ್ಯ ಸದಸ್ಯರಾದ ಶ್ರೀ ಎನ್ ಮಹೇಶ್ ಇವರು, ಕೈಗಾರಿಕೆಗಳನ್ನು ಪ್ರಾರಂಭಿಸಬೇಕಾದಲ್ಲಿ ಅರ್ಜಿದಾರರು ತಮ್ಮ ಸ್ವಂತ ಸಂಪನ್ಮೂಲದಿಂದ ಫಲಾನುಭವಿಗಳ ವಂತಿಕೆ 25% ರಷ್ಟು ಹಣವನ್ನು ಭರಿಸುವ ಸಾಮರ್ಥ್ಯ ಹೊಂದಿರಬೇಕಾಗಿರುತ್ತದೆ. ಆದ್ದರಿಂದ ಈ ಸಾಮರ್ಥ್ಯವಿರುವ ವ್ಯಕ್ತಿಗಳು ಮಾತ್ರ ನಿವೇಶನ/ಶೆಡ್‌ಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಐಹೊಳೆ ದುರ್ಯೋಧನ ಇವರು ಸಹ 75% ಸಹಾಯಧನ ನೀಡುವುದನ್ನು ಸಮರ್ಥಿಸಿದರು.

ಪ.ಜಾತಿ/ ಪ.ಪಂಗಡದವರು ಉದ್ದಿಮೆಗಳನ್ನು ಪ್ರಾರಂಭಿಸಲು ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ನಿವೇಶನ ಪಡೆಯಲು ಸಹಾಯಧನವನ್ನು ಗರಿಷ್ಠ 2 ಎಕರೆಗೆ ಮಾತ್ರ ಸೀಮಿತಗೊಳಿಸಿ ನೀಡಲಾಗುತ್ತಿದೆ ಎಂದು ಮಾನ್ಯ ಜಲಸಂಪನ್ಮೂಲ ಸಚಿವರು ಸಭೆಯಲ್ಲಿ ಸ್ಪಷ್ಟಪಡಿಸಿದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಭಾರೀ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ)**

## 23. ನಗರಾಭಿವೃದ್ಧಿ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 831.26 | 831.25 | 821.57 (99.83%) | 827.48 |
| ಟಿ.ಎಸ್.ಪಿ | 313.91 | 313.9 | 313.01 (99.72%) | 317.60 |
| ಒಟ್ಟು | 1145.16 | 1145.14 | 1134.58 | 1145.08 |

ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಇವರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಇ.ಎ.ಪಿ ಪ್ರಾಜೆಕ್ಟ್‌ನಲ್ಲಿ ಸಾಲ ಪಡೆದು ಕಾವೇರಿ ನೀರು ಸರಬರಾಜು ಯೋಜನೆ 5ನೇ ಹಂತದ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗುತ್ತಿದ್ದು, ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿ ಒದಗಿಸಲಾದ ರೂ.120.77 ಕೋಟಿಗಳನ್ನು ಡೀಮ್ಡ್ ವೆಚ್ಚವೆಂದು ಪರಿಗಣಿಸಿ ಒಟ್ಟು ರೂ.120.77 ಕೋಟಿಗಳನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡುವಂತೆ ಕೋರಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು, ಬೆಂಗಳೂರು ನಗರದಲ್ಲಿ ಸುಮಾರು 18 ಸಾವಿರ ಪೌರಕಾರ್ಮಿಕರು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರಿಗೆ ಮನೆಗಳನ್ನು

ನಿರ್ಮಿಸುವ ಸಲುವಾಗಿ ಬೆಂಗಳೂರು ನಗರಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ನೀಡಿರುವ ರೂ.754.71 ಕೋಟಿಗಳನ್ನು ಡೀಮ್ಡ್ ಎಂದು ಪರಿಗಣಿಸುವ ಬದಲು, ಅದರಲ್ಲಿ ರೂ.400 ಕೋಟಿಗಳನ್ನು ಮರುಹಂಚಿಕೆ ಮಾಡಬಹುದೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಎನ್.ಮಹೇಶ್ ಇವರು ನಗರಾಭಿವೃದ್ಧಿ ಇಲಾಖೆಯಲ್ಲಿ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅನುದಾನ ಹೆಚ್ಚಿನ ಮಟ್ಟಿಗೆ ಡೀಮ್ಡ್ ವೆಚ್ಚವಾಗುತ್ತಿರುವುದರಿಂದ, ಸದರಿ ಅನುದಾನವನ್ನು ನಗರ ಸಭೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರಿಗೆ ಪ್ರಸ್ತುತ ನೀಡಲಾಗುತ್ತಿರುವ ವೇತನವನ್ನು ಕನಿಷ್ಟ ವೇತನ ಮಟ್ಟಕ್ಕೆ ಹೆಚ್ಚಿಸಲು ಒತ್ತಾಯಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ, ಪೌರಕಾರ್ಮಿಕರ ಹುದ್ದೆಗಳನ್ನು ಖಾಯಂಗೊಳಿಸಲು ಮತ್ತು ವೇತನವನ್ನು ಹೆಚ್ಚಿಸಲು ಬೇಡಿಕೆ ಸಲ್ಲಿಸುತ್ತಿದ್ದು, ರಾಜ್ಯದಲ್ಲಿ ಎಷ್ಟು ಖಾಯಂ ಪೌರಕಾರ್ಮಿಕರು ಇದ್ದಾರೆ ಮತ್ತು ಎಷ್ಟು ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ನೀಡಲು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ. ಸದರಿ ಮಾಹಿತಿ ಬಂದ ನಂತರ ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದೆಂದು ತಿಳಿಸಿದರು.

ವಸತಿ ಇಲಾಖೆಯ ಪ್ರಸ್ತಾವನೆಯಂತೆ, ಕೊಳಚೆ ಅಭಿವೃದ್ಧಿ ಮಂಡಳಿಯಿಂದ ನಗರಪ್ರದೇಶದಲ್ಲಿ ನಿರ್ಮಿಸಲಾಗುತ್ತಿರುವ ಮನೆಗಳಿಗೆ ಫಲಾನುಭವಿಗಳ ವಂತಿಕೆಯಲ್ಲಿ 50% ಅಂದರೆ ರೂ.75,000/- ವನ್ನು ನಗರಾಭಿವೃದ್ಧಿ ಇಲಾಖೆಯಿಂದ ನೇರವಾಗಿ ಕೊಳಚೆ ಅಭಿವೃದ್ಧಿ ಮಂಡಳಿಗೆ ನೀಡಿದ್ದಲ್ಲಿ, ಮನೆಗಳ ನಿರ್ಮಾಣಕ್ಕೆ ಸಹಾಯವಾಗುತ್ತದೆ ಎಂದು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಏಜೆನ್ಸಿ ಸಲಹೆಗಾರರು ತಿಳಿಸಿದರು. ಅದರಂತೆ ನಗರಾಭಿವೃದ್ಧಿ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ)**

## 24. ಲೋಕೋಪಯೋಗಿ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 747.05 | 747.05 | 746.75 (99.96%) | 561.15 |
| ಟಿ.ಎಸ್.ಪಿ | 423.24 | 423.24 | 422.98 (99.94%) | 270.84 |
| ಒಟ್ಟು | 1170.29 | 1170.29 | 1169.73 | 831.99 |

ಲೋಕೋಪಯೋಗಿ ಇಲಾಖೆಗೆ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿ ಒದಗಿಸಲಾದ ಅನುದಾನದಲ್ಲಿ ಮುಂದುವರೆದ ಕಾಮಗಾರಿಗಳಿಗೆ ಅಗತ್ಯವಿರುವ ರೂ.493 ಕೋಟಿಗಳನ್ನು ಹೊರತುಪಡಿಸಿ ಉಳಿದ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯ/ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸಲು ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಳ್ಳುವಂತೆ ಸೂಚಿಸಿ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ)**

## 25. ಭಾರೀ ನೀರಾವರಿ ಇಲಾಖೆ:-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 1017.94 | 1017.93 | 1017.93 (100%) | 1450.60 | 432.66 |
| ಟಿ.ಎಸ್.ಪಿ | 741.12 | 741.11 | 741.11 (100%) | 809.00 | 67.88 |
| ಒಟ್ಟು | 1759.06 | 1759.04 | 1759.04 | 2259.60 | 500.54 |

ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಕಳೆದ ವರ್ಷಕ್ಕಿಂತ 2022-23ನೇ ಸಾಲಿನಲ್ಲಿ ಭಾರೀ ನೀರಾವರಿ ಇಲಾಖೆಗೆ ರೂ.500 ಕೋಟಿಗಳನ್ನು ಹೆಚ್ಚುವರಿಯಾಗಿ ನೀಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಅಪರ ಮುಖ್ಯ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಇವರು ಮಾತನಾಡಿ, ಇಲಾಖೆಯಡಿ ಕಾಯ್ದೆಯ ಸೆಕ್ಷನ್ 7(ಬಿ) ಅನ್ವಯ ಎಸ್.ಸಿ/ಎಸ್.ಟಿ ಜನಸಂಖ್ಯೆಗೆ ಅನುಗುಣವಾಗಿ 50% ಅನುದಾನವನ್ನು ನೀರಾವರಿ ಕಾಮಗಾರಿಗಳಿಗೆ ವೆಚ್ಚ ಮಾಡಲಾಗುತ್ತದೆ ಎಂದು ತಿಳಿಸಿದರು.

ಅಚ್ಚುಕಟ್ಟು ಪ್ರದೇಶಗಳಲ್ಲಿ ಆಯಾ ಕಾಮಗಾರಿಗಳ ವ್ಯಾಪ್ತಿಯಲ್ಲಿ ಎಸ್.ಸಿ./ಎಸ್.ಟಿ ರೈತರು ಹೊಂದಿರುವ ಜಮೀನಿನ ವಿಸ್ತೀರ್ಣದ ಅನುಪಾತದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನ ವೆಚ್ಚ ಮಾಡಬೇಕೇ ಹೊರತು ಜನಸಂಖ್ಯೆ ಆಧಾರದಲ್ಲಿ ಅಲ್ಲ ಎಂದು ಸ್ಪಷ್ಟಪಡಿಸಲಾಯಿತು.

ಮಾನ್ಯ ಸದಸ್ಯರಾದ ಶ್ರೀ ಎನ್.ಮಹೇಶ್ ಇವರು ಭಾರೀ ನೀರಾವರಿ ಇಲಾಖೆಯಡಿ ಅನುಷ್ಠಾನ ಮಾಡುತ್ತಿರುವ ಕಾರ್ಯಕ್ರಮಗಳು ಸೆಕ್ಷನ್ 7(ಡಿ) ಅನ್ವಯ ಡೀಮ್ಡ್ ವೆಚ್ಚವಾಗಿದ್ದು, ಇದನ್ನು ಕೈಬಿಡುವಂತೆ ಕೋರಿದರು. ಕೈಬಿಡಲು ಆಗದೇ ಇದ್ದಲ್ಲಿ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿನ ಪ.ಜಾತಿ/ಪ.ಪಂಗಡದ ರೈತರ ಜಮೀನಿನ ವಿಸ್ತೀರ್ಣ ಎಷ್ಟು ಇದೆ ಅದರ ಅನುಪಾತದಂತೆ ಮಾತ್ರ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ವೆಚ್ಚ ಮಾಡಬಹುದು ಎಂದು ಅಭಿಪ್ರಾಯ ಪಟ್ಟರು.

ಈ ಹಿನ್ನೆಲೆಯಲ್ಲಿ ಭಾರೀ ನೀರಾವರಿ ಇಲಾಖೆಯಿಂದ ನೀರಾವರಿ ಕಾಮಗಾರಿಗಳಿಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಬಳಸುವ ಬಗ್ಗೆ ಸಂಬಂಧಿಸಿದ ಅಚ್ಚುಕಟ್ಟು ಪ್ರದೇಶಗಳಲ್ಲಿ ಇರುವ ಎಸ್.ಸಿ/ಎಸ್.ಟಿ ರೈತರ ಜಮೀನಿನ ವಿಸ್ತೀರ್ಣವನ್ನು ಪರಿಶೀಲಿಸಿ ನಿಖರ ಮಾಹಿತಿಯನ್ನು ಸಮಾಜ ಕಲ್ಯಾಣ ಇಲಾಖೆಗೆ ಒದಗಿಸುವಂತೆ ತಿಳಿಸಿದರು.

ಮಾನ್ಯ ಜಲಸಂಪನ್ಮೂಲ ಸಚಿವರು, ಭಾರೀ ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆಯಲ್ಲಿ ಎಸ್.ಸಿ/ಎಸ್.ಟಿ ರೈತರಿಗೆ ಕೊಳವೆ ಬಾವಿಗಳನ್ನು, ಏತ ನೀರಾವರಿ ಸೌಲಭ್ಯಗಳನ್ನು ಸಹ ಒದಗಿಸಲಾಗುತ್ತಿದೆ ಎಂದು ಹೇಳಿದರು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾಯ್ದೆಯ ಸೆಕ್ಷನ್ 7 (ಬಿ) ಅಡಿ ವೆಚ್ಚ ಮಾಡಲಾಗುತ್ತಿದೆ ಎಂದು ಇಲಾಖೆಯಿಂದ ತಿಳಿಸಿದ್ದು, ಇದು ಸೆಕ್ಷನ್ 7 (ಡಿ) ಅಡಿ ಆಗಿರುವುದಿಲ್ಲ. ಆದಾಗ್ಯೂ ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಅನುದಾನದಿಂದ ರೂ.250.00 ಕೋಟಿಗಳನ್ನು ಕ್ರೈಸ್ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆಗೆ ನೀಡಲು ಸೂಚಿಸಿದರು.

ಭಾರೀ ನೀರಾವರಿ ಇಲಾಖೆಯಿಂದ 2020-21 ನೇ ಸಾಲಿನ ಅನುದಾನದ ಬಗ್ಗೆ ಈ ಕೆಳಕಂಡ ಅಂಶಗಳಿಗೆ (ಮಾನ್ಯ ಮುಖ್ಯಮಂತ್ರಿಗಳು ಅನುಮೋದಿಸಿರುವಂತೆ) ಘಟನೋತ್ತರ ಅನುಮೋದನೆ ಕೋರಿದ್ದು, ಅನುಮೋದಿಸಲಾಯಿತು.

1. To ratify the action taken by the Nigams as per the directions of FD vide UO note dated:20.02.2021 and consider 75% of SCSP & TSP grants allocated to WRD as Deemed Expenditure under Section 7(d) of the Act.
2. Transfering Rs.500 crores to KRIES out of WRD grant, as per the decision of Council and direction of Nodal agency will reduce the availability of grant to take up the works being proposed /already proposed by elected representatives. Hence, the transfer of Rs.500 crores is not implemented.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಭಾರೀ ನೀರಾವರಿ ಇಲಾಖೆ)**

## 26. ಸಣ್ಣ ನೀರಾವರಿ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 251.54 | 251.54 | 251.52 (99.99%) | 250.86 |
| ಟಿ.ಎಸ್.ಪಿ | 112.36 | 112.28 | 112.28 (99.93%) | 110.35 |
| ಒಟ್ಟು | 363.90 | 363.82 | 363.81 | 361.21 |

ಸದರಿ ಇಲಾಖೆಯಡಿ ಈಗಾಗಲೇ ಹಿಂದಿನ ಸಾಲುಗಳಲ್ಲಿ ಮಂಜೂರಾದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಸ್.ಸಿ.ಎಸ್.ಪಿ ಅಡಿ ರೂ.587.74 ಕೋಟಿ ಮತ್ತು ಟಿ.ಎಸ್.ಪಿ ಅಡಿ ರೂ.198.27 ಕೋಟಿ ಅನುದಾನ ಅಗತ್ಯವಿದ್ದು, ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ರೂ.361.21 ಕೋಟಿಗಳನ್ನು ಮುಂದುವರೆದ ಕಾಮಗಾರಿಗಳಿಗೆ ಮಾತ್ರ ವಿನಿಯೋಗಿಸಲು ಪ್ರಸ್ತಾಪಿಸಲಾಯಿತು. ಅದರಂತೆ, ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ)**

## 27. ವೈದ್ಯಕೀಯ ಶಿಕ್ಷಣ ಇಲಾಖೆ:-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 252.19 | 250.28 | 250.26 (99.23%) | 109.34 |
| ಟಿ.ಎಸ್.ಪಿ | 119.33 | 117.55 | 117.53 (98.49%) | 50.46 |
| ಒಟ್ಟು | 371.51 | 367.83 | 367.79 | 159.80 |

ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಕೆಲವು ಕಾಲೇಜು/ಸಂಸ್ಥೆಗಳಿಗೆ ಹಿಂದಿನ ವರ್ಷಗಳಲ್ಲಿ ನೀಡಿರುವ ಅನುದಾನದಲ್ಲಿ ರೂ.32.41 ಕೋಟಿ ವೆಚ್ಚ ಮಾಡಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಪ್ರಸಕ್ತ ಸಾಲಿನ ಅನುದಾನದಲ್ಲಿ ರೂ.19.33 ಕೋಟಿಗಳನ್ನು ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಪಾವತಿಗಾಗಿ ಸಮಾಜ ಕಲ್ಯಾಣ ಇಲಾಖೆಗೆ ಮರುಹಂಚಿಕೆ ಮಾಡುವಂತೆ ಪ್ರಸ್ತಾಪಿಸಲಾಯಿತು.

ಅದರಂತೆ ಮುಂದುವರೆದ ಕಾರ್ಯಕ್ರಮಗಳಿಗೆ ಪ್ರಸ್ತಾಪಿಸಿದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ)**

**28. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :-**

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 823.58 | 606.65 | 605.84 | 991.21 | 167.63 |
| ಟಿ.ಎಸ್.ಪಿ | 300.09 | 292.45 | 290.44 | 364.01 | 63.92 |
| ಒಟ್ಟು | 1123.67 | 899.1 | 896.28 | 1355.22 | 231.55 |

ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಕಳೆದ ವರ್ಷಕ್ಕಿಂತ 2022-23ನೇ ಸಾಲಿನಲ್ಲಿ ರೂ.231.55 ಕೋಟಿಗಳನ್ನು ಹೆಚ್ಚುವರಿಯಾಗಿ ಮೇಲ್ಕಂಡ ಇಲಾಖೆಗೆ ನೀಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀ.ಎನ್.ಮಹೇಶ್ ಇವರು ಆಯುಷ್ಮಾನ್ ಭಾರತ್ ಯೋಜನೆಯು ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ಹೆಚ್ಚಿನ ಸಂಖ್ಯೆಯ ಪ.ಜಾತಿ/ಪ.ಪಂಗಡದ ಫಲಾನುಭವಿಗಳಿಗೆ ಸೌಲಭ್ಯ ಒದಗಿಸುವಂತೆ ಹೇಳಿದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ,ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)**

**29. ಕಾರ್ಮಿಕ ಇಲಾಖೆ:-**

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 0.69 | 0.69 | 0.69 (100%) | 0.68 |
| ಟಿ.ಎಸ್.ಪಿ | 0.28 | 0.28 | 0.28 (100%) | 0.28 |
| ಒಟ್ಟು | 0.97 | 0.97 | 0.97 | 0.96 |

ಬಾಲ ಕಾರ್ಮಿಕರ ಪುನರ್ವಸತಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಬಗ್ಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ)**

### ೩೦. ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ ಮತ್ತು ತರಬೇತಿ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 118.93 | 118.92 | 118.90 (99.98%) | 93.14 |
| ಟಿ.ಎಸ್.ಪಿ | 66.26 | 66.25 | 66.23 (99.96%) | 47.33 |
| ಒಟ್ಟು | 185.19 | 185.17 | 185.13 | 140.47 |

ಮಾನ್ಯ ಸದಸ್ಯರಾದ ಶ್ರೀ.ಎನ್.ಮಹೇಶ್ ಇವರು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ ಮಹತ್ವದ ಕಾರ್ಯಕ್ರಮವಾಗಿದ್ದು, ಯುವಜನರಿಗೆ ಉದ್ಯೋಗ ದೊರಕಿಸಲು ಪೂರಕವಾಗಿ ಕೌಶಲ್ಯ ತರಬೇತಿ ನೀಡಬೇಕಾಗಿರುತ್ತದೆ. ಆದ್ದರಿಂದ, ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಕ್ಕೆ ಹೆಚ್ಚಿನ ಅನುದಾನ ಒದಗಿಸುವಂತೆ ಕೋರಿದರು.

ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಹೆಚ್ಚುವರಿ ಅನುದಾನ ಒದಗಿಸುವ ಬಗ್ಗೆ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಮಾನ್ಯ ಮುಖ್ಯಮಂತ್ರಿಗಳು ವೈಯಕ್ತಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದ್ದು, ಕೌಶಲ್ಯಾಭಿವೃದ್ಧಿಗೆ ಹೆಚ್ಚಿನ ಅನುದಾನ ಒದಗಿಸುವಂತೆ ಸೂಚಿಸಿದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಇಲಾಖೆ)**

### 31. ಇಂಧನ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 1634.51 | 1634.34 | 1634.34 (99.99) | 1924.39 | 289.88 |
| ಟಿ.ಎಸ್.ಪಿ | 584.70 | 584.63 | 584.63 (99.99) | 667.30 | 82.60 |
| ಒಟ್ಟು | 2219.21 | 2218.97 | 2218.97 | 2591.69 | 372.48 |

ಮಾನ್ಯ ಸಮಾಜ ಕಲ್ಯಾಣ ಸಚಿವರು, ಪ.ಜಾತಿ/ಪ.ಪಂಗಡದ ಬಿ.ಪಿ.ಎಲ್ ಕುಟುಂಬಗಳಿಗೆ ಮಾಸಿಕ 75 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸಲು ಆದೇಶಿಸಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಿದರು. ಈಗಾಗಲೇ ಗ್ರಾಮೀಣ ಮತ್ತು ನಗರ ಪ್ರದೇಶದ ಬಿ.ಪಿ.ಎಲ್ ಕುಟುಂಬಗಳಿಗೆ ಈ ಸೌಲಭ್ಯ ಒದಗಿಸುವ ಬಗ್ಗೆ ಇಂಧನ ಇಲಾಖೆಯು ಆದೇಶ ಹೊರಡಿಸಿರುತ್ತದೆ ಎಂಬ ಅಂಶವನ್ನು ಸಭೆಯ ಅವಗಾಹನೆಗೆ ತಂದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ)**

## ೩೨. ಕನ್ನಡ ಮತ್ತು ಸಂಸ್ಕೃತಿ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 10.82 | 10.82 | 10.81 (99.88) | 10.24 |
| ಟಿ.ಎಸ್.ಪಿ | 3.28 | 3.28 | 3.25 (99.12) | 3.19 |
| ಒಟ್ಟು | 14.10 | 14.10 | 14.06 | 13.44 |

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಮುಂದುವರೆದ ಕಾರ್ಯಕ್ರಮಗಳೊಂದಿಗೆ ಡಾ.ಬಿ.ಆರ್.ಅಂಬೇಡ್ಕರ್ ರವರ ಬರಹ ಮತ್ತು ಭಾಷಣ ಸಂಪುಟಗಳ ಮರು ಮುದ್ರಣ ಮತ್ತು ಸಂವಿಧಾನ ರಚನಾ ಸಭೆ ನಡವಳ ಸಂಪುಟಗಳ ಮರು ಮುದ್ರಣ ಮಾಡಲು ಇಲಾಖೆಯಿಂದ ಪ್ರಸ್ತಾಪಿಸಿರುವಂತೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ)**

## ೩೩. ಯೋಜನಾ ಇಲಾಖೆ :-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ | 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ |
|---|---|---|---|---|---|
| ಎಸ್.ಸಿ.ಎಸ್.ಪಿ | 494.37 | 494.37 | 494.37 (100%) | 722.63 | 228.26 |
| ಟಿ.ಎಸ್.ಪಿ | 178.97 | 178.96 | 178.96 (100%) | 300.20 | 121.23 |
| ಒಟ್ಟು | 673.34 | 673.33 | 673.33 | 1022.83 | 349.49 |

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಪ್ರಸಕ್ತ ಸಾಲಿನಲ್ಲಿ ರೂ.450 ಕೋಟಿಗಳನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಆದ್ದರಿಂದ, ಸದರಿ ಮಂಡಳಿಗೆ ನೀಡಿರುವ ಅನುದಾನವನ್ನು ಎಸ್.ಸಿ/ಎಸ್.ಟಿ ವಿದ್ಯಾರ್ಥಿನಿಲಯಗಳ ಮತ್ತು ಕ್ರೈಸ್ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸಲು ಈಗಾಗಲೇ ಪಟ್ಟಿಯನ್ನು ಯೋಜನಾ ಇಲಾಖೆಗೆ ಸಲ್ಲಿಸಿರುವ ಬಗ್ಗೆ ಪ್ರಸ್ತಾಪಿಸಲಾಯಿತು.

ಯೋಜನಾ ಇಲಾಖೆಯ ಪ್ರದೇಶಾಭಿವೃದ್ಧಿ ಮಂಡಳಿಯ ನಿರ್ದೇಶಕರು, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ನೀಡಿರುವ ಅನುದಾನದಲ್ಲಿ ರೂ.300 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದ್ದು, ಉಳಿದ ರೂ.550 ಕೋಟಿಗಳಲ್ಲಿ ವಸತಿ ಶಾಲೆ ಮತ್ತು ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸಲಾಗುವುದು ಎಂದು ತಿಳಿಸಿದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.
(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ)**

## 34. ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:-

(ರೂ. ಕೋಟಿಗಳಲ್ಲಿ)

| ಉಪಯೋಜನೆ | 2021-22ನೇ ಸಾಲಿನ ಹಂಚಿಕೆ | ಬಿಡುಗಡೆ | ವೆಚ್ಚ | 2022-23ನೇ ಸಾಲಿನ ಹಂಚಿಕೆ |
|---|---|---|---|---|
| ಎಸ್.ಸಿ.ಎಸ್.ಪಿ | 4059.87 | 4057.15 | 4045.34 | 3361.76 |
| ಟಿ.ಎಸ್.ಪಿ | 1507.00 | 1457.23 | 1446.22 | 1476.12 |
| ಒಟ್ಟು | 5566.87 | 5514.38 | 5491.56 | 4837.88 |

ಕಳೆದ ಸಾಲಿಗಿಂತ ಕಡಿಮೆ ಅನುದಾನ ಹಂಚಿಕೆಯಾಗಿರುವ ಬಗ್ಗೆ ಗಮನಿಸಿ ಮಾನ್ಯ ಮುಖ್ಯಮಂತ್ರಿಗಳು ಕಳೆದ ವರ್ಷ ನೀಡಿರುವ ಮೂಲ ಹಂಚಿಕೆಯ ಬಗ್ಗೆ ಮಾಹಿತಿ ನೀಡಲು ತಿಳಿಸಿದರು.

ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ಹಿಂದಿನ ವರ್ಷದಲ್ಲಿ ವೇತನ ವೆಚ್ಚ ಸೇರಿ ಎಸ್.ಸಿ.ಎಸ್.ಪಿ ಅಡಿ ರೂ.3710.47 ಕೋಟಿ ಮತ್ತು ಟಿ.ಎಸ್.ಪಿ ಅಡಿ ರೂ.1395.79 ಕೋಟಿ ಒಟ್ಟು ರೂ. 5,106.26 ಕೋಟಿಗಳನ್ನು ಮೂಲತಃ ಹಂಚಿಕೆ ಮಾಡಲಾಗಿದೆ ಮತ್ತು ಪೂರಕ ಆಯವ್ಯಯಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಹೆಚ್ಚುವರಿಯಾಗಿ ರೂ.460.61 ಕೋಟಿ ನೀಡಲಾಗಿದೆ ಎಂದು ತಿಳಿಸಿದರು. ಪ್ರಸಕ್ತ ಸಾಲಿನಲ್ಲಿ ವೇತನ ವೆಚ್ಚವನ್ನು ಹೊರತುಪಡಿಸಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಒಟ್ಟು ರೂ.4,837.88 ಕೋಟಿ ಅನುದಾನ ಒದಗಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯಿಂದ ವಿವಿಧ ಕಾರ್ಯಕ್ರಮಗಳನ್ನು ಅನುಷ್ಟಾನ ಮಾಡಲು ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ ಒಟ್ಟು ರೂ.462.00 ಕೋಟಿ ಅನುದಾನವನ್ನು ಒದಗಿಸಲು ಆರ್ಥಿಕ ಇಲಾಖೆಗೆ ಸೂಚಿಸಿದರು. ಇದರಿಂದ ಒಟ್ಟು ಹಂಚಿಕೆ ರೂ.5,300.00 ಕೋಟಿಯಾಗುತ್ತದೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರು, ರಾಜೀವ್‌ಗಾಂಧಿ ವಸತಿ ನಿಗಮದಿಂದ ಬಹಳಷ್ಟು ಮನೆಗಳನ್ನು ಪೂರ್ಣಗೊಳಿಸಲು ಹೆಚ್ಚಿನ ಅನುದಾನದ ಅಗತ್ಯವಿದ್ದು, ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಡಿ ಪ್ರಸಕ್ತ ಸಾಲಿನಲ್ಲಿ ಒದಗಿಸಲಾದ ರೂ.300 ಕೋಟಿಗಳ ಅನುದಾನವನ್ನು ಅಪೂರ್ಣಗೊಂಡಿರುವ ಮನೆಗಳಿಗೆ ಉಪಯೋಗಿಸಲು ಬಿಡುಗಡೆ ಮಾಡುವಂತೆ ತಿಳಿಸಿದರು.

ವಿವಿಧ ನಿಗಮಗಳಲ್ಲಿ ಎಷ್ಟು ಅನುದಾನ ಲಭ್ಯವಿದೆ ಎಂದು ಮಾಹಿತಿ ನೀಡಲು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದಾಗ, ರೂ.1600.00 ಕೋಟಿ ಲಭ್ಯವಿದೆ ಎಂದು ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರು ತಿಳಿಸಿದರು.

ಹಿಂದಿನ ವರ್ಷದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಆಯವ್ಯಯದಲ್ಲಿ ನೀಡಿರುವ ಅನುದಾನದಿಂದ ರೂ.250.00 ಕೋಟಿಗಳನ್ನು ರಾಜೀವ್‌ಗಾಂಧಿ ವಸತಿ ನಿಗಮಕ್ಕೆ ಅಪೂರ್ಣಗೊಂಡಿರುವ ಮನೆಗಳಿಗೆ ಉಪಯೋಗಿಸುವಂತೆ ಆರ್ಥಿಕ ಇಲಾಖೆಯಿಂದ ನಿರ್ದೇಶನ ನೀಡಲಾಗಿದೆ. ಆದರೆ, ವಸತಿ ಇಲಾಖೆಗೆ ನೀಡಿರುವ 5 ಲಕ್ಷ ಹೊಸ ಮನೆಗಳ ಭೌತಿಕ ಗುರಿಗಳಲ್ಲಿ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ವಸತಿ ರಹಿತರಿಗೆ ಮನೆ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ಸಹ ತಿಳಿಸಲಾಗಿದೆ.

ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಸಮುದಾಯಗಳಲ್ಲಿ ಕೆಲವರಿಗೆ ನಿವೇಶನ ಇರುವುದಿಲ್ಲ ಹಾಗೂ ಕೆಲವರಿಗೆ ಮನೆ ಇರುವುದಿಲ್ಲ. ಸಾಮಾನ್ಯ ಆಯ್ಕೆ ಪ್ರಕ್ರಿಯೆಯಲ್ಲಿ ಈ ಸಮುದಾಯದವರನ್ನು ಆಯ್ಕೆ ಮಾಡದ ಕಾರಣ ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಿರುವ ರೂ.300

ಕೋಟಿಗಳನ್ನು ಸದರಿ ಸಮುದಾಯಗಳ ಮನೆಗಳ ನಿರ್ಮಾಣಕ್ಕೆ ಮಾತ್ರ ಉಪಯೋಗಿಸಲು ಪ್ರಸ್ತಾಪಿಸಲಾಯಿತು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ, ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಜನರು ಟೆಂಟ್‌ಗಳಲ್ಲಿ ವಾಸ ಮಾಡುತ್ತಿದ್ದು, ಮನೆಗಳ ನಿರ್ಮಾಣಕ್ಕಾಗಿ ಅನುದಾನ ಒದಗಿಸಲು ಪದೇ-ಪದೇ ಮನವಿ ಸಲ್ಲಿಸುತ್ತಿದ್ದಾರೆ. ಆದ್ದರಿಂದ, ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಿರುವ ಅನುದಾನವನ್ನು ಈ ಜನರಿಗೆ ಮನೆ ನಿರ್ಮಾಣಕ್ಕಾಗಿ ಬಳಸಿಕೊಳ್ಳಲಾಗುವುದು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಎನ್.ಮಹೇಶ್ ಇವರು, ಭೂಒಡೆತನ ಯೋಜನೆಯಡಿ ಘಟಕ ವೆಚ್ಚನವನ್ನು ರೂ.15 ಲಕ್ಷದಿಂದ ರೂ.20 ಲಕ್ಷದವರೆಗೆ ಹೆಚ್ಚಿಸಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಿದರು. ಈಗಿರುವ ಷರತ್ತಿನಂತೆ ವಾಸವಿರುವ ಜಾಗದಿಂದ 10 ಕಿ.ಮೀ ವ್ಯಾಪ್ತಿಯೊಳಗೆ ಜಮೀನು ಲಭ್ಯವಾಗದೇ ಇರುವ ಕಾರಣ ಈ ವ್ಯಾಪ್ತಿಯನ್ನು ಹೆಚ್ಚಿಸಲು ಪರಿಗಣಿಸಬೇಕೆಂದು ಕೋರಿದರು. ಮುಂದುವರೆದು, ಪ.ಜಾತಿ/ಪ.ಪಂಗಡದ ಜನರ ಆರ್ಥಿಕ ಅಭಿವೃದ್ಧಿಗಾಗಿ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವ 6 ನಿಗಮಗಳಿಗೆ ಹೆಚ್ಚಿನ ಅನುದಾನ ಒದಗಿಸುವಂತೆ ಸಹ ಕೋರಿದರು.

ಭೂ ರಹಿತ ಕೃಷಿ ಕಾರ್ಮಿಕರಿಗೆ ಭೂಮಿಯನ್ನು ನೀಡುತ್ತಿದ್ದು, ಅವರು ಸ್ವತಃ ವ್ಯವಸಾಯ ಮಾಡಲು ಅನುಕೂಲವಾಗುವಂತೆ ದೂರದ ಮಿತಿಯನ್ನು ನಿಗದಿಪಡಿಸಲಾಗಿರುತ್ತದೆ ಎಂದು ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು.

ಪ್ರಸಕ್ತ ಸಾಲಿನಿಂದ ಗಂಗಾ ಕಲ್ಯಾಣ ಯೋಜನೆಯಡಿ ಫಲಾನುಭವಿಗಳಿಗೆ ನೇರವಾಗಿ ಡಿ.ಬಿ.ಟಿ ಮೂಲಕ ಸಹಾಯಧನವನ್ನು ಪಾವತಿಸಲಾಗುವುದೆಂಬ ಅಂಶವನ್ನು ಸಭೆಯ ಅವಗಾಹನೆಗೆ ತರಲಾಯಿತು.

ಮಾನ್ಯ ಮುಖ್ಯಮಂತ್ರಿಗಳು, ಆಯವ್ಯಯ ಘೋಷಣೆಯಂತೆ ಡಾ.ಬಿ.ಆರ್. ಅಂಬೇಡ್ಕರ್ ಅವರು ಭೇಟಿ ನೀಡಿದ ಸ್ಥಳಗಳ ಅಭಿವೃದ್ಧಿಗಾಗಿ ರೂ.20.00 ಕೋಟಿ ನಿಗದಿಪಡಿಸುವಂತೆ ತಿಳಿಸಿದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಅನುಮೋದಿತ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ)**

**೩೮. ಕಾನೂನು ಇಲಾಖೆ:-**

ಕಾನೂನು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಇತ್ಯಾದಿಗಳನ್ನು ಒದಗಿಸಲು ಪ್ರಸಕ್ತ ಸಾಲಿನಲ್ಲಿ ಅನುದಾನ ನೀಡಿರುವುದಿಲ್ಲ ಎಂದು ತಿಳಿಸಿದಾಗ, ಮಾನ್ಯ ಮುಖ್ಯಮಂತ್ರಿಗಳು ನಿರ್ದಿಷ್ಟವಾಗಿ ಎಷ್ಟು ಅನುದಾನ ಬೇಕಾಗಿದೆ ಎಂದು ಮಾಹಿತಿ ಒದಗಿಸುವಂತೆ ತಿಳಿಸಿದರು.

ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಕನಿಷ್ಟ ರೂ.10 ಕೋಟಿಗಳು ಬೇಕಾಗಿರುತ್ತದೆ ಎಂದು ತಿಳಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಸದ್ಯಕ್ಕೆ ರೂ.10 ಕೋಟಿ ಒದಗಿಸಲು ಮತ್ತು ಅಗತ್ಯವಿದ್ದಲ್ಲಿ ಹೆಚ್ಚಿನ ಅನುದಾನ ನೀಡಲು ಕ್ರಮ ವಹಿಸುವಂತೆ ಆರ್ಥಿಕ ಇಲಾಖೆಗೆ ಸೂಚಿಸಿದರು.

**ಅಂತಿಮವಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನಂತೆ ಕ್ರಮವಹಿಸಲು ಎಲ್ಲಾ ಅನುಷ್ಠಾನ ಇಲಾಖೆಯ ಅಧಿಕಾರಿಗಳಗೆ ಸೂಚನೆಗಳನ್ನು ನೀಡಿದರು.**

1. ಹಿಂದಿನ ವರ್ಷಗಳಲ್ಲಿ ಲಭ್ಯವಿರುವ ಅನುದಾನವನ್ನು ಅನುಮೋದಿತ ಕಾರ್ಯಕ್ರಮಗಳಿಗೆ ಉಪಯೋಗಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಒಂದು ವೇಳೆ ಉಪಯೋಗಿಸಲು ಸಾಧ್ಯವಾಗದೇ ಇದ್ದಲ್ಲಿ ಸದರಿ ಅನುದಾನವನ್ನು Pooled fund ಗೆ ಜಮೆ ಮಾಡುವುದು.
2. ಎಲ್ಲಾ ಇಲಾಖೆಗಳಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ನೀಡಿರುವ ಅನುದಾನದಲ್ಲಿ ವೈಯಕ್ತಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಆದ್ಯತೆ ನೀಡುವುದು.
3. ಶಾಸನಬದ್ಧ ಕಾಯ್ದೆಯಂತೆ ಪ.ಜಾತಿ/ಪ.ಪಂಗಡದವರ ಅಭಿವೃದ್ಧಿಗೆ ಮಾತ್ರ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅನುದಾನವನ್ನು ಉಪಯೋಗಿಸುವುದು.
4. ಎಸ್.ಸಿ/ಎಸ್.ಟಿ/ಬಿ.ಸಿ/ಅಲ್ಪಸಂಖ್ಯಾತ ನಿಗಮಗಳಲ್ಲಿ ಲಭ್ಯವಿರುವ ರೂ.1600 ಕೋಟಿಗಳನ್ನು ಮುಂದಿನ ಮೂರು ತಿಂಗಳುಗಳಲ್ಲಿ (ಗಂಗಾ ಕಲ್ಯಾಣ ಯೋಜನೆ ಹೊರತುಪಡಿಸಿ) ವೆಚ್ಚ ಮಾಡಲು ಕ್ರಮವಹಿಸತಕ್ಕದ್ದು, ತಪ್ಪಿದಲ್ಲಿ ಈ ಮೊತ್ತವನ್ನು ಹಿಂಪಡೆದು ಪ್ರಸಕ್ತ ಸಾಲಿನ ಕಾರ್ಯಕ್ರಮಗಳಿಗೆ ಮರುಹಂಚಿಕೆ ಮಾಡಲಾಗುವುದು.
5. ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದೇ ಇದ್ದಲ್ಲಿ ಅವರ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಈ ಅಧಿಕಾರಿಗಳನ್ನು ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯಿಂದ ತೆರವುಗೊಳಿಸಲಾಗುವುದು.
6. ಸರ್ಕಾರದ ಮಹತ್ವಾಕಾಂಕ್ಷಿಯ ಯೋಜನೆಗಳಾದ ಶಿಕ್ಷಣ, ಆರೋಗ್ಯ, ಅಪೌಷ್ಟಿಕತೆ ನಿವಾರಣೆ, ಮಹಿಳೆಯರ ಅಭಿವೃದ್ಧಿ ಮತ್ತು ವಿದ್ಯಾರ್ಥಿನಿಲಯಗಳ ಕ್ಲಸ್ಟರ್ ಯೋಜನೆಗಳಿಗೆ ಆಗಸ್ಟ್ 15ರೊಳಗೆ ಚಾಲನೆ ನೀಡುವುದು.
7. ಹಾಸ್ಟಲ್ ಕಟ್ಟಡಗಳನ್ನು ನಿರ್ಮಿಸುವ ಬಗ್ಗೆ ನಿವೇಶನಗಳನ್ನು ಸಹ ಆಗಸ್ಟ್ ತಿಂಗಳೊಳಗೆ ಗುರುತಿಸಿ ಇಲಾಖೆಯ ಸ್ವಾಧೀನಕ್ಕೆ ಪಡೆಯುವುದು.
8. ಇಂದಿನ ಸಭೆಯಲ್ಲಿ ಕೈಗೊಳ್ಳಲಾಗಿರುವ ನಿರ್ಣಯಗಳ ಬಗ್ಗೆ ತಕ್ಷಣ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಆದೇಶಗಳನ್ನು ಹೊರಡಿಸಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದು.
9. ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅನುದಾನವನ್ನು ಯಾವ ಕಾರ್ಯಕ್ರಮಗಳಿಗೆ ನೀಡಲಾಗಿದೆ ಮತ್ತು ಆ ಕಾರ್ಯಕ್ರಮಗಳಲ್ಲಿ ಎಸ್.ಸಿ/ಎಸ್.ಟಿ ಫಲಾನುಭವಿಗಳಿಗೆ ಸೌಲಭ್ಯವನ್ನು ಒದಗಿಸಲಾಗಿದೆಯೇ ಎಂಬ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಕಾಲಕಾಲಕ್ಕೆ ಮೇಲ್ವಿಚಾರಣೆ ಮಾಡಿ ಅಗತ್ಯ ಕ್ರಮ ತೆಗೆದುಕೊಳ್ಳುವುದು.

(ಕ್ರಮ ಎಲ್ಲಾ ಇಲಾಖೆಗಳ ಅನುಷ್ಠಾನ ಅಧಿಕಾರಿಗಳು)

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಗಿದೆ.

(ಬಸವರಾಜ ಬೊಮ್ಮಾಯಿ)
ಮುಖ್ಯ ಮಂತ್ರಿಗಳು ಹಾಗೂ ಅಧ್ಯಕ್ಷರು,
ರಾಜ್ಯ ಅನುಸೂಚಿತ ಜಾತಿಗಳು/
ಅನುಸೂಚಿತ ಪಂಗಡಗಳ
ಅಭಿವೃದ್ಧಿ ಪರಿಷತ್ತು.